ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೧೨೯**

**ಪಟ್ಟಿ – ೦೩**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೇಳನೇ ಅಧಿವೇಶನ

**ಗುರುವಾರ, ದಿನಾಂಕ : ೦೫ನೇ ಫೆಬ್ರವರಿ, ೨೦೧೫**

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

## ಉಡುಪಿ ಜಿಲ್ಲೆಯ ಗಂಗೊಳ್ಳಿಯಲ್ಲಿ ಪುನಃ ಪೊಲೀಸ್ ಠಾಣೆ ಪ್ರಾರಂಭಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೧೮೫ (೧೫೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿರುವ ಪೊಲೀಸ್ ಠಾಣೆಯನ್ನು ತ್ರಾಸಿಗೆ ವರ್ಗಾಯಿಸಲು ಕಾರಣವೇನು ;

(ಆ) ಕೋಮು ಸೂಕ್ಷ್ಮ ಪ್ರದೇಶವಾದ ಗಂಗೊಳ್ಳಿಯಲ್ಲಿ ಪುನಃ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ ಕಾರಣವೇನು ?

## ರಾಜ್ಯದಲ್ಲಿ ನೂತನ ಪ್ರಾರಂಭಗೊಂಡ ಪಶು ಆಸ್ಪತ್ರೆಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೧೮೬ (೧೫೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇಲಾಖೆ ವತಿಯಿಂದ ಪಶು ಆಸ್ಪತ್ರೆಗಳನ್ನು ಪ್ರಾರಂಭ ಮಾಡತಕ್ಕಂತಹ ಸಂದರ್ಭದಲ್ಲಿ ಅನುಸರಿಸಲಾಗುವ ಮಾನದಂಡಗಳೇನು ;



(ಆ) ರಾಜ್ಯದಲ್ಲಿ ಪಶುಗಣತಿ ಮಾಡಲು ಇರುವ ವ್ಯವಸ್ಥೆಗಳೇನು ; ಮತ್ತು ಎಷ್ಟು ವರ್ಷಗಳಿಗೊಮ್ಮೆ ಪಶುಗಣತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ;

(ಇ) ಕಳೆದ ೨ ವರ್ಷಗಳಲ್ಲಿ ಎಷ್ಟು ಹೊಸ ಪಶು ಆಸ್ಪತ್ರೆಗಳನ್ನು ತೆರೆಯಲಾಗಿದೆ ; ಮತ್ತು ಯಾವುವು ? (ಜಿಲ್ಲಾವಾರು ವಿವರ ನೀಡುವುದು)

## ಕಳೆದ ೨ ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಸಂಭವಿಸಿದ ಅಗ್ನಿ ಅವಘಡಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೧೮೭ (೧೫೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಸಂಭವಿಸಿದ ಅಗ್ನಿ ಅವಘಡಗಳೆಷ್ಟು ; ಅಗ್ನಿಶಾಮಕದಳ ಭಾಗವಹಿಸಿ ಅಗ್ನಿ ನಿಯಂತ್ರಿಸಿದ ಪ್ರಕರಣಗಳ ಸಂಖ್ಯೆ ಎಷ್ಟು ;

(ಆ) ಕುಂದಾಪುರ ತಾಲ್ಲೂಕಿನ ಅಗ್ನಿಶಾಮಕ ದಳವು ಗ್ರಾಮಾಂತರ ಪ್ರದೇಶದಲ್ಲಿರುವುದರಿಂದ ಅದನ್ನು ರಾಜ್ಯ ರಸ್ತೆ ಅಥವಾ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇಲ್ಲವಾದ್ದಲ್ಲಿ ಅದರ ಪೂರ್ಣ ಪ್ರಮಾಣದ–ಪ್ರಯೋಜನ ಪಡೆಯುವಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರ ಗಮನಿಸಿದೆಯೇ ?

## ಗಣಿಗಾರಿಕೆ ಪರವಾನಿಗೆದಾರರ ಮಾಹಿತಿಯನ್ನು ಮಾರಾಟ ತೆರಿಗೆ ಇಲಾಖೆಗೆ ನೀಡುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೧೮೮ (೧೫೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಕೇವಲ ಕೆಲವು ಗಣಿ ಪರವಾನಿಗೆದಾರರ ಗಣಿಗಾರಿಕೆಯ ಮಾಹಿತಿಯನ್ನು ಮಾತ್ರ ಮಾರಾಟ ತೆರಿಗೆ ಇಲಾಖೆಗೆ ನೀಡಿ ಕೆಲವು ಗಣಿ ಪರವಾನಿಗೆದಾರರ ಗಣಿಗಾರಿಕೆಯ ಮಾಹಿತಿಯನ್ನು ನೀಡದೆ ಇರುವ ಹಿನ್ನೆಲೆ ಏನು ;

(ಆ) ಗಣಿಗಾರಿಕೆಗೆ ಪರವಾನಿಗೆ ಹೊಂದಿರುವ ಪ್ರತಿಯೊಬ್ಬರ ಮಾಹಿತಿಯನ್ನು ಮಾರಾಟ ತೆರಿಗೆ ಇಲಾಖೆಗೆ ನೀಡಿದಲ್ಲಿ ಅದರಿಂದ ಸರ್ಕಾರದ ಬೊಕ್ಕಸಕ್ಕೆ ಲಾಭವಾಗುವುದಿಲ್ಲವೇ ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಹಣ ಬಿಡುಗಡೆ ಹಾಗೂ ಸಾಲದ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೯ (೧೮೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬೆಂಗಳೂರಿನ ಯಾವಯಾವ ಅಭಿವೃದ್ಧಿ ಕೆಲಸಗಳಿಗಾಗಿ ಯಾವ ಯಾವ ಸಂಸ್ಥೆಗಳಿಂದ, ಎಷ್ಟೆಷ್ಟು ಹಣವನ್ನು ಯಾವ ಯಾವ ಆಧಾರದ ಮೇಲೆ ಸಾಲವಾಗಿ ಪಡೆಯಲಾಗಿರುತ್ತದೆ ; (ಪೂರ್ಣ ಮಾಹಿತಿ ಒದಗಿಸುವುದು)



(ಆ) ಮೇಲ್ಕಂಡ ಸಾಲಗಳನ್ನು ಯಾವ ಯಾವ ನಿಬಂಧನೆಗಳ ಮೇರೆಗೆ ಪಡೆಯಲಾಗಿದೆ ;

(ಇ) ಸದರಿ ಸಾಲಗಳನ್ನು ಪಾವತಿಸಲು ಇರುವ ಕಾಲಮಿತಿ ಎಷ್ಟು ; ಸಾಲಗಳನ್ನು ತೀರಿಸಲು ಯಾವ ಯಾವ ಆದಾಯದ ಮೂಲಗಳಿಂದ ಹಣ ಸಂಗ್ರಹಿಸಲು ಉದ್ದೇಶಿಸಲಾಗಿದೆ ;

(ಈ) ಈವರೆವಿಗೂ ಪಡೆದ ಸಾಲಗಳನ್ನು ಯಾವ ಯಾವ ಅಭಿವೃದ್ಧಿ ಕೆಲಸಗಳಿಗಾಗಿ ಉಪಯೋಗಿಸಲಾಗಿದೆ ; ಸದರಿ ಕಾಮಗಾರಿಗಳು ಉತ್ತಮ ಗುಣಮಟ್ಟದಿಂದ ಕೂಡಿದೆಯೇ ? (ಈ ಬಗ್ಗೆ ಗುಣಮಟ್ಟ ಪರಿಶೀಲನಾಧಿಕಾರಿಗಳಿಂದ ಪಡೆದಿರುವ ವರದಿಯ ಪ್ರತಿಯನ್ನು ನೀಡುವುದು)

## ತಿರುಪತಿ–ತಿರುಮಲ ದೇವಸ್ಥಾನದ ಜಮೀನು ಮತ್ತು ಪೂಜೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೦ (೧೮೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತಿರುಪತಿ–ತಿರುಮಲ ದೇವಸ್ಥಾನದಲ್ಲಿ ರಾಜ್ಯ ಸರ್ಕಾರ ಹಾಗೂ ದತ್ತಿ ಸಂಸ್ಥೆಯಿಂದ ನೀಡುತ್ತಿರುವ ಸಹಾಯಧನ ಹಾಗೂ ಇತರೆ ಕೊಡುಗೆಗಳೇನು ;

(ಆ) ಕರ್ನಾಟಕದ ವತಿಯಿಂದ ಸದರಿ ದೇವಸ್ಥಾನದಲ್ಲಿ ಯಾವ ಯಾವ ಪೂಜೆಗಳನ್ನು ಮಾಡಿಸಲಾಗುತ್ತದೆ ; ಹಾಗೂ ಅಲ್ಲಿಯ ಕರ್ನಾಟಕ ಭವನದಲ್ಲಿನ ಯಾವ ಯಾವ ಅಧಿಕಾರಿಗಳಿಗೆ ಯಾವ ಯಾವ ಜವಾಬ್ದಾರಿ ವಹಿಸಲಾಗಿದೆ ; ಅವರ ಕರ್ತವ್ಯ ನಿರ್ಲಕ್ಷತೆಯಿಂದಾಗಿ ಯಾತ್ರಿಕರಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು ;

(ಇ) ಕರ್ನಾಟಕದಿಂದ ತಿರುಮಲ ಬೆಟ್ಟಕ್ಕೆ ಹೋಗುತ್ತಿರುವ ಭಕ್ತರಿಗಾಗಿ ಸದರಿ ಬೆಟ್ಟದಲ್ಲಿ ಹಾಲಿ ಇರುವ ಮೂಲಭೂತ ಸೌಲಭ್ಯಗಳು ಯಾವುವು ; ಇವುಗಳ ಕೊರತೆಯಿಂದ ಭಕ್ತರಿಗೆ ತೊಂದರೆಗಳಾಗುತ್ತಿರುವುದನ್ನು ತಪ್ಪಿಸಲು ಕೈಗೊಳ್ಳಲಿರುವ ಕ್ರಮಗಳೇನು ;

(ಈ) ಆಂಧ್ರ ಸರ್ಕಾರದಿಂದ ಕರ್ನಾಟಕ ಸರ್ಕಾರಕ್ಕೆ ಸೇರಿದ ಎಲ್ಲಾ ಜಮೀನನ್ನು ಬಿಡಿಸಿಕೊಳ್ಳಲು ಸರ್ಕಾರ ಈವರೆವಿಗೆ ಕೈಗೊಂಡಿರುವ ಕ್ರಮಗಳೇನು ? (ಪೂರ್ಣ ಮಾಹಿತಿ ಒದಗಿಸುವುದು)

## ಜ್ಯೋತಿ ಸಂಜೀವಿನಿ ಯೋಜನೆ ಮಾಹಿತಿ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೧ (೧೬೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜ್ಯೋತಿ ಸಂಜೀವಿನಿ ಆರೋಗ್ಯ ಯೋಜನೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಅಧಿಕಾರಿ/ನೌಕರರುಗಳ ಅವಲಂಭಿತರು ಯಾರು



ಯಾರು ; ಇವರು ವೈದ್ಯಕೀಯ ಚಿಕಿತ್ಸೆ ಪಡೆಯಲು ಇರುವ ನಿಬಂಧನೆ ಹಾಗೂ ಮಾನದಂಡಗಳು ಯಾವುವು ;

(ಆ) ಕಳೆದ ೩ ವರ್ಷಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಅಧಿಕಾರಿ/ನೌಕರರು ಖಾಸಗಿ ಅಧಿಸೂಚಿತ ಆಸ್ಪತ್ರೆಗಳಲ್ಲಿ ಅವಲಂಬಿತರಿಗೆ ಚಿಕಿತ್ಸೆ ಕೊಡಿಸಿರುತ್ತಾರೆ ; ವಿವರ ನೀಡುವುದು ; ಅವಲಂಬಿತರಿಗೆ ಚಿಕಿತ್ಸೆ ಕೊಡಿಸಲು ಇರುವ ನಿಬಂಧನೆ/ ಮಾನದಂಡಗಳಾವುವು ;

(ಇ) ಅವಲಂಬಿತ ತಂದೆ ತಾಯಿಯವರು ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಿಸುವ ಸ್ಥಳದಲ್ಲಿರದೆ, ತಮ್ಮ ಸ್ವಗ್ರಾಮದಲ್ಲಿ ವಾಸವಾಗಿದ್ದರೆ ಅವಲಂಬಿತರಲ್ಲವೆಂದು ಸರ್ಕಾರದ ನಿಯಮದಲ್ಲಿ ಇದೆಯೇ ; (ಇದ್ದಲ್ಲಿ ಸದರಿ ನಿಯಮದ ಪ್ರತಿ ಒದಗಿಸುವುದು) ;

(ಈ) ಇದ್ದಲ್ಲಿ ಇದೊಂದು ಅಮಾನವೀಯ ಅವೈಜ್ಞಾನಿಕ ಹಾಗೂ ಅವಾಸ್ತವಿಕ ನಿಯಮವಾಗಿದ್ದು, ಇದನ್ನು ಕೂಡಲೇ ರದ್ದುಪಡಿಸಿ ಅವರು ಸ್ವಗ್ರಾಮದಲ್ಲಿ ವಾಸವಾಗಿದ್ದರೂ ಅವರನ್ನು ಅವಲಂಬಿತರೆಂದು ಪರಿಗಣಿಸಿ ಆದೇಶ ಹೊರಡಿಸಲು ಕೈಗೊಳ್ಳುವ ಕ್ರಮವೇನು ? (ಜ್ಯೋತಿ ಸಂಜೀವಿನಿ ಆರೋಗ್ಯ ಯೋಜನೆ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಜಿಲ್ಲಾವಾರು ವಿವರ ಒದಗಿಸುವುದು)

## ಜೈಲಿನಲ್ಲಿರುವ ಮಹಿಳಾ ಖೈದಿಗಳ ಮೇಲೆ ದೌರ್ಜನ್ಯ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨ (೧೮೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ಜೈಲುಗಳಲ್ಲಿ ಅದರಲ್ಲೂ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಮಹಿಳಾ ಖೈದಿಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತಿವೆಯೆಂದು ದೂರುಗಳು ಬಂದಿರುವುದು ನಿಜವೆ ಹಾಗೂ ಯಾವ ಯಾವ ಮೂಲಗಳಿಂದ ದೂರುಗಳು ಬಂದಿರುತ್ತವೆ ;

(ಆ) ಕಳೆದ ೩ ವರ್ಷಗಳಿಂದ ಖೈದಿಗಳು ಹಾಗೂ ಜೈಲು ಸಿಬ್ಬಂದಿಗಳಿಂದ ಮಹಿಳಾ ಖೈದಿಗಳ ಮೇಲೆ ನಡಿದಿದೆ ಎನ್ನಲಾದ ದೌರ್ಜನ್ಯ ಹಾಗೂ ಭ್ರಷ್ಟಾಚಾರದ ಮೇಲೆ ದಾಖಲಾದ ದೂರುಗಳ ಸಂಖ್ಯೆ ಎಷ್ಟು ; ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಬೆಂಗಳೂರಿನಲ್ಲಿ ನಡೆಯುತ್ತಿರುವ ಅಪರಾಧ ಜಗತ್ತಿನಲ್ಲಿ ಹೆಚ್ಚಿನ ಕೊಲೆ, ಸುಲಿಗೆ, ದರೋಡೆಗಳು ಜೈಲಿನ ಒಳಗಿನ ಖೈದಿಗಳ ಪಿತೂರಿಯಿಂದ ನಡೆಯುತ್ತಿದ್ದು ಇವುಗಳನ್ನು ತಡೆಗಟ್ಟುವಲ್ಲಿ ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಗಳೇನು ;

(ಈ) ಜೈಲು ಅಧಿಕಾರಿ ಹಾಗೂ ಸಿಬ್ಬಂದಿಗಳ ಸಹಕಾರ ಹಾಗೂ ಭ್ರಷ್ಟಾಚಾರವಿಲ್ಲದಿದ್ದಲ್ಲಿ ಜೈಲಿನೊಳಗೆ ಆಯ್ದ ಖೈದಿಗಳಿಗೆ ಮೊಬೈಲ್, ಮಾರಕಾಸ್ತ್ರಗಳು ಹಾಗೂ ಇತರೆ ಐಶಾರಾಮಿ ಸೌಲಭ್ಯಗಳು ದೊರೆಯಲು ಹೇಗೆ ಸಾಧ್ಯ ?



## ಪರಿಸರ ಮಾಲಿನ್ಯ ಮತ್ತು ಒಳಚರಂಡಿ ನೀರಿನಿಂದ ದುಷ್ಪರಿಣಾಮ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೩ (೧೮೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನಲ್ಲಿ ವ್ಯಾಪಕ ಪರಿಸರ ಮಾಲಿನ್ಯ ಉಂಟಾಗಲು ಅಧಿಕ ವಾಹನಗಳು, ಕಾರ್ಖಾನೆಗಳು ಹಾಗೂ ರಾಜಕಾಲುವೆಗಳನ್ನು ಆಧುನೀಕರಣಗೊಳಿಸದೆ ಇರುವುದು ಹಾಗೂ ಕಾಲುವೆಗಳಿಗೆ ಅನೇಕ ಕಡೆ ಒಳಚರಂಡಿ ನೀರನ್ನು ಬಿಡುತ್ತಿರುವುದು ಪರಿಸರ ಮಾಲಿನ್ಯಕ್ಕೆ ಕಾರಣವಲ್ಲವೆ ;

(ಆ) ಈ ಮೇಲ್ಕಂಡ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು ;

(ಇ) ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ೬೯ನೇ ವಾರ್ಡಿನ ನೂತನ ಬಸ್ ನಿಲ್ದಾಣದಿಂದ ಪಕ್ಕದ ರಾಜಕಾಲುವೆಗೆ ೧ ವರ್ಷದಿಂದ ಸ್ಯಾನಿಟರಿ ನೀರು ಬಿಟ್ಟಿರುವುದರಿಂದ ಸದರಿ ಪ್ರದೇಶದ ಸುತ್ತಮುತ್ತಲ ಬಡಾವಣೆಗಳಲ್ಲಿ ವ್ಯಾಪಕ ಪರಿಸರ ಮಾಲಿನ್ಯ, ಬೋರ್‌ವೆಲ್ ನೀರು ಉಪಯೋಗಿಸಲಾಗದಷ್ಟು ಕಲುಷಿತಗೊಂಡು ನಾಗರೀಕರ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗುತ್ತಿದ್ದು, ಇದನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಹಾಗೂ ಮುಂದೆ ಕೈಗೊಳ್ಳುವ ಕ್ರಮಗಳೇನು ; ಹಾಗೂ ಇದಕ್ಕೆ ಸಂಬಂಧಿಸಿದ ಆರೋಗ್ಯಾಧಿಕಾರಿಗಳ ಕರ್ತವ್ಯ ಲೋಪದ ಮೇಲೆ ಕೈಗೊಳ್ಳುವ ಕ್ರಮಗಳೇನು ? (ಪೂರ್ಣ ವಿವರ ನೀಡುವುದು)

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿನ ಟೆಂಡರ್ ಶ್ಯೂರ್ ಕಾಮಗಾರಿಯಿಂದ ಉದ್ಭವಿಸಿರುವ ಸಮಸ್ಯೆ ಹಾಗೂ ಅನಾನೂಕೂಲತೆಗಳು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೪ (೧೬೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಬಿ.ಬಿ.ಎಂ.ಪಿ. ವ್ಯಾಪ್ತಿಯ ಯಾವ ಯಾವ ಪ್ರದೇಶ, ರಸ್ತೆಗಳಲ್ಲಿ ಟೆಂಡರ್ ಶ್ಯೂರ್ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ; ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿದೆ ; ಇದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು ; (ರಸ್ತೆವಾರು ಉದ್ದೇಶ ಕುರಿತಂತೆ ಮಾಹಿತಿಯನ್ನು ಒದಗಿಸುವುದು)

(ಆ) ಟೆಂಡರ್ ಶ್ಯೂರ್ ಕಾಮಗಾರಿಗಳನ್ನು ಕೈಗೊಳ್ಳುವ ರಸ್ತೆಗಳ ಅಗಲ ಎಷ್ಟು ; ಇವುಗಳಲ್ಲಿ ವಾಹನ ಸಂಚಾರಕ್ಕೆ ಮತ್ತು ಪಾದಚಾರಿಗಳ ಓಡಾಟಕ್ಕೆ ಪ್ರತ್ಯೇಕಿಸಲಾದ ವಿಸ್ತೀರ್ಣವೆಷ್ಟು ; (ರಸ್ತೆವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಈ ರಸ್ತೆಗಳಲ್ಲಿನ ವಾಹನ ಸಂಚಾರ ದಟ್ಟಣೆ ಮತ್ತು ಪಾದಚಾರಿಗಳ ಸಂಖ್ಯೆಯ ಅಂದಾಜು ಸರ್ಕಾರಕ್ಕೆ ಇದೆಯೇ ; ಹಾಗಿದ್ದಲ್ಲಿ, ಯಾವ ಆಧಾರ ಮತ್ತು ಮಾಹಿತಿಯಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಈ) ಈ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಸಂಸ್ಥೆಗಳು ಯಾವುವು ; ಕಾಮಗಾರಿ ನಿರ್ವಹಣೆಗಾಗಿ ಅನುಸರಿಸಲಾಗುತ್ತಿರುವ ಮಾನದಂಡಗಳೇನು ; (ವಿವರ ಒದಗಿಸುವುದು)



(ಉ) ಈ ಕಾಮಗಾರಿಗಳಿಂದಾಗಿ ಉದ್ಭವಿಸುತ್ತಿರುವ ಸಮಸ್ಯೆಗಳು ಹಾಗೂ ಅನಾನುಕೂಲತೆಗಳ ಕುರಿತಾಗಿ ಸರ್ಕಾರವು ಅಂದಾಜಿಸಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಬಿ.ಬಿ.ಎಂ.ಪಿ. ವತಿಯಿಂದ ವಿಕಲಚೇತನರಿಗಾಗಿ ನೀಡಿರುವ ತ್ರಿಚಕ್ರ ವಾಹನಗಳ ಬಗ್ಗೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೫ (೧೬೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳ ಅವಧಿಯಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ವಿಲಕಚೇತನರಿಗಾಗಿ ಎಷ್ಟು ತ್ರಿಚಕ್ರ ವಾಹನಗಳನ್ನು ನೀಡಲಾಗಿದೆ ; ವರ್ಷವಾರು ಇದಕ್ಕಾಗಿ ಬಜೆಟ್‌ನಲ್ಲಿ ಕಾಯ್ದಿರಿಸಿದ ಮೊತ್ತವೆಷ್ಟು; ಮತ್ತು ವಿನಿಯೋಗಿಸಲಾದ ಮೊತ್ತವೆಷ್ಟು ; (ಮಾಹಿತಿ ಒದಗಿಸುವುದು)

(ಆ) ಪ್ರಸ್ತುತ ತ್ರಿಚಕ್ರ ವಾಹನಗಳನ್ನು ಕೋರಿರುವ ಅಂಗವಿಕಲರ ಸಂಖ್ಯೆ ಎಷ್ಟು ; ಇದಕ್ಕೆ ಮೀಸಲಿಟ್ಟಿರುವ ಅನುದಾನ ಎಷ್ಟು ; ಶೀಘ್ರವಾಗಿ ವಿತರಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ? (ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿನ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಹಾಗೂ ಅವುಗಳ ಆಸ್ತಿಗಳ ಬಗ್ಗೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೬ (೧೬೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳ ಸಂಖ್ಯೆ ಎಷ್ಟು ; ಅವುಗಳಿಗೆ ಸೇರಿದ ಆಸ್ತಿ ಪ್ರಮಾಣ ಎಷ್ಟು ; (ಭೂಮಿ, ಒಡವೆ ಹಾಗೂ ಇನ್ನಿತರ ವಿವರಗಳನ್ನೊಳಗೊಂಡ ದೇವಾಲಯವಾರು ಪ್ರತ್ಯೇಕ ಮಾಹಿತಿ ಒದಗಿಸುವುದು) ಹಾಗೂ ಈ ದೇವಾಲಯಗಳ ಅರ್ಚಕರಿಗೆ ನೀಡುತ್ತಿರುವ ಸಂಭಾವನೆ/ ವೇತನ ಎಷ್ಟು ; (ವಿವರ ಒದಗಿಸುವುದು)

(ಆ) ಮುಜರಾಯಿ ದೇವಾಲಯಗಳಿಗೆ ಸೇರಿದ ಅತಿಕ್ರಮಿಸಲಾಗಿರುವ ಭೂಮಿ ಪ್ರಮಾಣ ಎಷ್ಟು ; ಈ ದೇವಾಲಯಗಳಲ್ಲಿ ಆಗಿರುವ ಹಣದ ಅವ್ಯವಹಾರ, ಮತ್ತು ಆಭರಣಗಳ ಕಳುವು ಪ್ರಕರಣಗಳ ಸಂಖ್ಯೆ ಎಷ್ಟು ; (ಪ್ರತ್ಯೇಕವಾಗಿ ವಿವರವಾದ ಮಾಹಿತಿ ಒದಗಿಸುವುದು)

(ಇ) ದೇವಾಲಯದ ಆಸ್ತಿ ಮತ್ತು ಆಭರಣಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು (ಪೂರ್ಣ ವಿವರ ಒದಗಿಸುವುದು) ?



## ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಸಿಬ್ಬಂದಿಗಳ ಬಗ್ಗೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೭ (೧೬೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಚಿವಾಲಯವೂ ಸೇರಿದಂತೆ ರಾಜ್ಯದ ಯಾವ ಯಾವ ಇಲಾಖೆಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆ ; (ಇಲಾಖಾವಾರು, ಹುದ್ದೆವಾರು ಯಾವ ಕಾಲಾವಧಿಯಿಂದ ಎಂಬುದರ ಕುರಿತು ಸಂಪೂರ್ಣ, ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)

(ಆ) ಸಿಬ್ಬಂದಿಗಳ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಯಾವ ಯಾವ ಇಲಾಖೆಗಳಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ ; (ನಿಗದಿಪಡಿಸಿರುವ ವಿದ್ಯಾರ್ಹತೆ ಹಾಗೂ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು)

(ಇ) ಯಾವ ಕಾಲಮಿತಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ? (ಇಲಾಖಾವಾರು ಪ್ರತ್ಯೇಕ ಮಾಹಿತಿಯನ್ನು ಒದಗಿಸುವುದು)

## ಹೈದರಾಬಾದ್–ಕರ್ನಾಟಕ ಭಾಗದಲ್ಲಿನ ಹುದ್ದೆಗಳು ಭರ್ತಿ ಮಾಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೮ (೨೮೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕ ಪ್ರಾಂತ್ಯದ ಜಿಲ್ಲೆಗಳಲ್ಲಿ ೩೭೧ಜೆ ವಿಧಿ ಅಧೀನದಲ್ಲಿ ಈ ವಿಭಾಗಕ್ಕೆ ಇತರೆ ವಿಭಾಗದಿಂದ ಖಾಲಿಯಿರುವ

ಹುದ್ದೆಗಳಿಗೆ ವರ್ಗಗೊಂಡ ಇಲಾಖಾವಾರು ಸಿಬ್ಬಂದಿಯ ಪದನಾಮ ಮತ್ತು ಹೆಸರುಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು ;

(ಆ) ೩೭೧ಜೆ ವಿಧಿ ಅಧೀನದಲ್ಲಿ ಇಲ್ಲಿಯವರೆಗೆ ನೇರ ನೇಮಕಾತಿಗೊಂಡ ಇಲಾಖಾವಾರು ಸಿಬ್ಬಂದಿಗಳ ವೃಂದವಾರು ಮಾಹಿತಿ ಒದಗಿಸುವದು ;

(ಇ) ಕಳೆದ ವರ್ಷ ಡಿಸೆಂಬರ್ ತಿಂಗಳಲ್ಲಿ ಕಲ್ಬುರ್ಗಿಯಲ್ಲಿ ಸಚಿವ ಸಂಪುಟ ಸಭೆಯಲ್ಲಿ ಸುಮಾರು ೫೦ ಸಾವಿರ ಹುದ್ದೆಗಳನ್ನು ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ನಿರ್ಣಯ ಕೈಗೊಳ್ಳಲಾಗಿದ್ದು ನಿಜವೇ ; (ಮಾಹಿತಿ ನೀಡುವುದು)

(ಈ) ಹಾಗಿದ್ದಲ್ಲಿ, ಸದರಿ ಹುದ್ದೆಗಳನ್ನು ಯಾವ ಮುಖಾಂತರ ತುಂಬಲಾಗುವುದು ; ಈ ಪ್ರಾಂತ್ಯದ ಜನರಿಗೋಸ್ಕರ ಅನುಕೂಲವಾಗುವಂತೆ ಕೂಡಲೇ ಯಾವ ಕ್ರಮ ಕೈಗೊಳ್ಳಲಾಗುವುದು ? (ಮಾಹಿತಿ ನೀಡುವುದು)

## ಅನ್ಯ ಸೇವೆ ಆಧಾರ ಪದ್ಧತಿಯ ಪರಿಷ್ಕರಣೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯ (೧೬೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆಗೊಂಡಿದ್ದರೂ ಸಹ ಅನ್ಯ ಸೇವೆ (ಓ.ಓ.ಡಿ) ಆಧಾರದ ಮೇಲೆ ಪುನಃ ಅದೇ



ಹುದ್ದೆಯಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ರೀತಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಮತ್ತು ಅಧಿಕಾರಿಗಳ ಸಂಖ್ಯೆ ಎಷ್ಟು ; ಎಷ್ಟು ವರ್ಷಗಳಿಂದ ಓ.ಓ.ಡಿ. ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಓ.ಓ.ಡಿ. ಆಧಾರದ ಮೇಲೆ ನಿಯೋಜಿಸುವ ಪದ್ಧತಿಯ ನಿಯಮ ಪರಿಷ್ಕರಿಸಿ ಎಲ್ಲಾ ಸಿಬ್ಬಂದಿಗಳಿಗೂ ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸುವ ಬಗ್ಗೆ ಸರ್ಕಾರ ಯಾವ ಕ್ರಮ ವಹಿಸುತ್ತಿದೆ ; (ವಿವರ ನೀಡುವುದು)

(ಈ) ಓ.ಓ.ಡಿ. ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಅವರ ಮಾತೃ ಇಲಾಖೆಗೆ ವಾಪಾಸ್ ಕಳುಹಿಸದೇ ಇರಲು ಕಾರಣಗಳೇನು ?

## ಬಡಾವಣೆಗಳ ರಚನೆಯಿಂದ ಪ್ರಾಧಿಕಾರಕ್ಕೆ ಬಂದ ಶುಲ್ಕ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೦ (೨೭೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ನಗರದಲ್ಲಿ ಕಳೆದ ಎರಡು ವರ್ಷಗಳಿಂದ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡಲಾಗಿದೆ (ವಿವರ ನೀಡುವುದು) ;

(ಆ) ಸದರಿ ಬಡಾವಣೆಯ ವಿಸ್ತೀರ್ಣ ಹಾಗೂ ರಚಿಸಲಾದ ನಿವೇಶನಗಳ ಸಂಖ್ಯೆ ಎಷ್ಟು ; (ಮಾಹಿತಿಗಳನ್ನೊಳಗೊಂಡಂತೆ ವಿವರ ನೀಡುವುದು)

(ಇ) ಈ ಬಡಾವಣೆಗಳ ರಚನೆಯಿಂದ ಪ್ರಾಧಿಕಾರಕ್ಕೆ ಬಂದ ಅಭಿವೃದ್ಧಿ ಮತ್ತು ಇತರೆ ಶುಲ್ಕಗಳು ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಅಧಿಕೃತ ಖಾಸಗಿ ಬಡಾವಣೆಗಳನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳಾವುವು ? (ವಿವರ ನೀಡುವುದು)

## ಅನುಚ್ಛೇದ ೩೭೧(ಜೆ) ಅನ್ವಯ ಸೇವಾ ಮುಂಬಡ್ತಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೧ (೧೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೈದ್ರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸಿದ್ದರೂ ಸಹ ಕೆ.ಎ.ಟಿ. ತಡೆಯಾಜ್ಞೆಯಿಂದಾಗಿ ಬಡ್ತಿ ನೀಡದೇ ಕಡೆಗಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ತಡೆಯಾಜ್ಞೆ ತೆರವುಗೊಳಿಸಲು ಮತ್ತು ನಿಯಮಗಳಿಗೆ ಸೂಕ್ತ ತಿದ್ದುಪಡಿ ತಂದು ಶೇಕಡ ೦೨ ಕ್ಕಿಂತ ಕಡಿಮೆ ಇರುವ



ಸದರಿ ನೌಕರರಿಗೆ ಬಡ್ತಿ ನೀಡಿ ಅವರ ನೈತಿಕ ಸ್ಥೈರ್ಯ ಕುಗ್ಗದಂತೆ ಮಾಡಲು ಸರ್ಕಾರ ತೆಗೆದುಕೊಳ್ಳಲಾಗುವ ಕ್ರಮಗಳೇನು ;

(ಇ) ಕಳೆದ ಒಂದೂವರೆ ವರ್ಷದಿಂದ ಹೈದ್ರಾಬಾದ್–ಕರ್ನಾಟಕ ಸೇರಿದ ನೌಕರರಿಗೆ ಯಾವ ಯಾವ ಇಲಾಖೆಯಲ್ಲಿ ಎಷ್ಟು ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨ (೧೬೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾನೂನು ಎಷ್ಟರ ಮಟ್ಟಿಗೆ ಪರಿಣಾಮ ಬೀರುತ್ತದೆ ; (ವಿವರಿಸಿ)

(ಆ) ಈ ಕಾನೂನು ಜಾರಿಗೊಂಡ ನಂತರ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ಮಾಡಿದ ಆರೋಪದ ಮೇಲೆ ಎಷ್ಟು ಮಂದಿಗೆ ದಂಡ ವಿಧಿಸಲಾಗಿದೆ ; ಇದರಿಂದ ಸಂಗ್ರಹವಾಗಿರುವ ದಂಡ ಶುಲ್ಕವೆಷ್ಟು ? (ಜಿಲ್ಲಾವಾರು ತಿಳಿಸಿ)

## ರಾಜ್ಯದಲ್ಲಿ ಅನುಮತಿ ಪಡೆದು ನಡೆಸುತ್ತಿರುವ ಜಲ್ಲಿ ಕ್ರಷರ್‌ಗಳು

**ಶ್ರೀ ಅಶ್ವತ್‌ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೦೩ (೩೫೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅನುಮತಿ ಪಡೆದು ನಡೆಸುತ್ತಿರುವ ಜಲ್ಲಿ ಕ್ರಷರ್‌ಗಳ ಸಂಖ್ಯೆ ಎಷ್ಟು ; ಅನುಮತಿಯಿಲ್ಲದೆ ನಡೆಸುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಜಲ್ಲಿ ಕ್ರಷರ್‌ನಿಂದ ರಾಜ್ಯಕ್ಕೆ ೨೦೧೩–೧೪ ಹಾಗೂ ೨೦೧೫ರಲ್ಲಿ ಬಂದಿರುವ ಆದಾಯ/ರಾಯಲ್ಟಿ ಮೊತ್ತವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಅಕ್ರಮ ಗಣಿಗಾರಿಕೆಯಿಂದ ಸಂಗ್ರಹವಾದ ಮೊತ್ತ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

## ೨೦೧೪ರ ಹೊಸ ಕೈಗಾರಿಕೆ ನೀತಿ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪ (೧೬೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೧೪ರ ಹೊಸ ಕೈಗಾರಿಕಾ ನೀತಿಯಿಂದ ಹೊಸದಾಗಿ ೨೦೧೪–೧೫ರಲ್ಲಿ ಹೂಡಿಕೆಯಾದ ಹೊಸ ಬಂಡವಾಳ ಎಷ್ಟು; ಹೂಡಿಕೆ ಕಂಪನಿಗಳು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಹೊಸ ಕೈಗಾರಿಕಾ ನೀತಿಯಿಂದ ಹೊಸದಾಗಿ ಸೃಷ್ಟಿಯಾಗಿರುವ ಉದ್ಯೋಗಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಕಂಪನಿವಾರು ವಿವರ ನೀಡುವುದು)

(ಇ) ೨೦೧೩–೧೪ನೇ ಹಾಗೂ ೨೦೧೪–೧೫ರಲ್ಲಿ ಯಾವ ಯಾವ ಯೋಜನೆಗಳಲ್ಲಿ ಬಂಡವಾಳವನ್ನು ಹೂಡಿದೆ ; ಹಾಗೂ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ ಉನ್ನತಾಧಿಕಾರಿ ಸಮಿತಿ ಎಷ್ಟು ಯೋಜನೆಗಳಿಗೆ ಒಪ್ಪಿಗೆ ಸೂಚಿಸಿದೆ ; ಎಷ್ಟು ಯೋಜನೆಗಳು ಆರಂಭವಾಗಿವೆ ; (ಜಿಲ್ಲಾವಾರು ಕಂಪನಿವಾರು ವಿವರ ನೀಡುವುದು)



(ಈ) ಸಣ್ಣ ಕೈಗಾರಿಕಾ ಉದ್ಯಮಿಗಳಿಗೆ ಭೂಮಿ ನೀಡುವಾಗ ಎಷ್ಟು ವರ್ಷಕ್ಕೆ ಗುತ್ತಿಗೆ ಆಧಾರದಲ್ಲಿ ನೀಡಲಾಗುವುದು ?

## ರಾಜ್ಯ ಸರ್ಕಾರಿ ನೌಕರರಿಗೆ ನಗದು ರಹಿತ ವೈದ್ಯಕೀಯ ಸೌಲಭ್ಯ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೫ (೩೫೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರಿ ನೌಕರರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಸೌಲಭ್ಯಕ್ಕಾಗಿ "ಜ್ಯೋತಿ ಸಂಜೀವಿನಿ" ಯೋಜನೆ ಜಾರಿಗೆ ಬಂದಿರುವುದೇ ; ಬಂದಿದ್ದರೆ, ಯಾವಾಗ ಜಾರಿಗೆ ತರಲಾಯಿತು ;

(ಆ) ಂಯೋಜನೆಯಿಂದ ಮಾರಣಾಂತಿಕ ಕಾಯಿಲೆಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರಿ ನೌಕರರಿಗೆ ಮತ್ತು ಕುಟುಂಬ ಅವಲಂಬಿತರಿಗೆ ಇದರಿಂದ ಅನುಕೂಲವಾಗುತ್ತಿರುವುದೇ ? (ವಿವರ ನೀಡುವುದು)

## ಮರಳು ಬ್ಲಾಕ್‌ಗಳು

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೬ (೧೬೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಹಾಗೂ ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ ಗುರುತಿಸಿರುವ ಮರಳು ಬ್ಲಾಕ್‌ಗಳು ಎಷ್ಟು ;

(ಆ) ಗಣಿಗಾರಿಕೆ ಮಾಡಲು ನೀಡಿರುವ ಅನುಮತಿ ಎಷ್ಟು ; ಯಾವ ಯಾವ ಏಜನ್ಸಿಗಳಿಗೆ ಅನುಮತಿ ನೀಡಲಾಗಿದೆ ? (ವಿವರ ಒದಗಿಸುವುದು)

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಮಧ್ಯರಾತ್ರಿ ನೀರು ಬಿಡುತ್ತಿರುವುದರಿಂದ ಆಗುತ್ತಿರುವ ತೊಂದರೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೦೭ (೧೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವ ಯಾವ ವಾರ್ಡ್‌ಗಳಲ್ಲಿ ಅಥವಾ ಪ್ರದೇಶಗಳಲ್ಲಿ ರಾತ್ರಿ ೧೧ರ ನಂತರ ನೀರು ಬಿಡಲಾಗುತ್ತಿದೆ ;

(ಆ) ಈ ರೀತಿ ಮಧ್ಯರಾತ್ರಿಯಲ್ಲಿ ನೀರು ಬಿಡುವುದರಿಂದ ಅಲ್ಲಿನ ನಾಗರೀಕರಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ರೀತಿ ಸರಿರಾತ್ರಿಯಲ್ಲಿ ನೀರು ಬಿಡಲು ಕಾರಣಗಳೇನು ;

(ಈ) ಈ ತೊಂದರೆಯನ್ನು ನೀಗಿಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು ?



## ಸರ್ಕಾರಿ ಕೆಲಸಗಳಲ್ಲಿ ವರ್ಗ ಪ್ರವರ್ಗಗಳ ಮೀಸಲಾತಿ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೦೮ (೧೭೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಕೆಲಸಗಳಿಗೆ ಮತ್ತು ವ್ಯಾಸಂಗ ಮಾಡಲು ಮಾಡಿರುವ ವರ್ಗ ಪ್ರವರ್ಗಗಳ ಮೀಸಲಾತಿ ವಿವರ ನೀಡಿ ;

(ಆ) ಈ ರೀತಿಯ ಮೀಸಲಾತಿಯಲ್ಲಿ ತಂದೆ ತಾಯಿ ಯಾರೆಂದು ತಿಳಿಯದ, ಜಾತಿ ಅರಿಯದ ಅನಾಥ ಮಕ್ಕಳ ಅಥವಾ ಅನಾಥಾಲಯದಲ್ಲಿ ಬೆಳೆಯುತ್ತಿರುವ ಮಕ್ಕಳಿಗೆ ವ್ಯಾಸಂಗ ಮತ್ತು ಸರ್ಕಾರಿ ಉದ್ಯೋಗಗಳಿಗೆ ಮೀಸಲಾತಿ ನೀಡಲಾಗಿದೆಯೇ ;

(ಇ) ನೀಡಲಾಗಿದ್ದಲ್ಲಿ ವಿವರ ನೀಡಿ ಇಲ್ಲವಾದಲ್ಲಿ ಕಾರಣವೇನು ; ಇವರಿಗೆ ಮೀಸಲಾತಿ ನೀಡುವುದರಲ್ಲಿ ಏನಾದರೂ ತೊಡಕುಗಳಿವೆಯೇ ;

(ಈ) ಇವರುಗಳಿಗೆ ಮೀಸಲಾತಿ ನೀಡಲು ಸರ್ಕಾರ ಚಿಂತನೆ ನಡೆಸಿ ಮೀಸಲಾತಿ ನೀಡಲು ಮುಂದಾಗುವುದೇ ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿಸಿಕೊಂಡ ಹೊಸ ಪ್ರದೇಶಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೦೯ (೧೭೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿಸಿಕೊಂಡ ಹೊಸ ಪ್ರದೇಶಗಳು ಯಾವುವು ;

(ಆ) ಆ ರೀತಿ ಹೊಸದಾಗಿ ಸೇರಿಸಿಕೊಂಡ ಪ್ರದೇಶಗಳಲ್ಲಿ ಒಟ್ಟು ಎಷ್ಟು ಮತ್ತು ಯಾವ ಯಾವ ವಾರ್ಡ್‌ಗಳು ಬರುತ್ತವೆ ;

(ಇ) ಆ ಪ್ರದೇಶಗಳಲ್ಲಿನ ಸರ್ಕಾರಿ ಶಾಲೆಗಳು ಹಾಗೂ ಆಸ್ಪತ್ರೆಗಳು ಇದುವರೆವಿಗೂ ಬಿಬಿಎಂಪಿಗೆ ಹಸ್ತಾಂತರವಾಗಿಲ್ಲದಿರುವುದು ನಿಜವೇ ;

(ಈ) ಇದಲ್ಲದೆ ಈ ಪ್ರದೇಶಗಳಲ್ಲಿ ಇನ್ನೂ ಯಾವ ರೀತಿಯ ಬದಲಾವಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಡಿಯಲ್ಲಿ ತರಬೇಕಿದೆ ;

(ಉ) ಈ ಪ್ರಕ್ರಿಯೆಯ ವಿಳಂಬಕ್ಕೆ ಕಾರಣಗಳೇನು ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಬೋರ್‌ವೆಲ್‌ಗಳ ನೀರಿನ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

**೨೧೦** (೧೭೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರು ಸರಬರಾಜು ಮಾಡುವ ಸಲುವಾಗಿ ಬಿಬಿಎಂಪಿ ನಿರ್ವಹಣೆ ಮಾಡುತ್ತಿರುವ ಬೋರ್‌ವೆಲ್‌ಗಳ ನೀರನ್ನು ಜಲಮಂಡಳಿಯ ಕಾವೇರಿ ನೀರು ಸರಬರಾಜಿನ ಪೈಪ್‌ನಲ್ಲಿಯೇ ಸರಬರಾಜು ಆಗುವಂತೆ ಮಾಡಿರುವುದು ನಿಜವೇ ;



(ಆ) ಅಂದಾಜು ಎಷ್ಟು ಬೋರ್‌ವೆಲ್‌ಗಳ ನೀರನ್ನು ಈ ರೀತಿಯಾಗಿ ಸರಬರಾಜು ಮಾಡಲಾಗುತ್ತಿದೆ ;

(ಇ) ಬಿಬಿಎಂಪಿಗೆ ಸೇರಿದ ಬೋರ್‌ವೆಲ್‌ಗಳಲ್ಲಿ ಅಂದಾಜು ಎಷ್ಟು ಪ್ರಮಾಣದ ನೀರನ್ನು ಈ ರೀತಿ ಸರಬರಾಜು ಮಾಡಲಾಗುತ್ತಿದೆ ;

(ಈ) ಇದರಿಂದ ಸಾರ್ವಜನಿಕರ ಬಳಿ ಸಂಗ್ರಹಿಸಲಾಗುತ್ತಿರುವ ಅಂದಾಜು ಹಣದ ಪ್ರಮಾಣವೆಷ್ಟು ;

(ಉ) ಈ ಬೋರ್‌ವೆಲ್‌ಗಳ ನಿರ್ವಹಣೆಯನ್ನು ಜಲಮಂಡಳಿಯು ಭರಿಸುತ್ತಿದೆಯೇ ; ಇಲ್ಲವಾದಲ್ಲಿ ಕಾರಣವೇನು ?

## ಬೆಂಗಳೂರಿನ ತ್ಯಾಜ್ಯ ವಿಲೇವಾರಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೧೧ (೧೭೩) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ತ್ಯಾಜ್ಯ ವಿಲೇವಾರಿ ಕುರಿತಂತೆ ಮಂಡೂರು ಜನತೆಗೆ ಈ ಹಿಂದೆ ಸರ್ಕಾರದಿಂದ ನೀಡಿದ್ದ ವಾಗ್ದಾನವೇನು ;

(ಆ) ವಾಗ್ದಾನದ ಎಷ್ಟು ಅಂಶಗಳನ್ನು ಈಡೇರಿಸಲಾಗಿದೆ ; ಈಗಲೂ ಮಂಡೂರಿನಲ್ಲಿ ಕಸ ವಿಲೇವಾರಿ ಮಾಡಲಾಗುತ್ತಿದೆಯೇ ; ಇಲ್ಲವಾದಲ್ಲಿ ಯಾವ ಸ್ಥಳದಲ್ಲಿ ವಿಲೇವಾರಿ ಮಾಡಲಾಗುತ್ತಿದೆ ;

(ಇ) ಈಗಾಗಲೇ ಮಂಡೂರಿನಲ್ಲಿ ಹಾಕಿ ಸಂಸ್ಕರಿಸದೆ ಉಳಿದಿರುವ ಕಸದ ಪ್ರಮಾಣವೇನು ; ಅದನ್ನು ಸಂಸ್ಕರಿಸಲು ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುವುದು; ಇದಕ್ಕೆ ತಗಲುವ ಕಾಲಾವಧಿಯೇನು ?

## ಮುಜರಾಯಿ ಇಲಾಖೆಯ ಕೆಲಸಗಳನ್ನು ಜಿಲ್ಲಾಧಿಕಾರಿ ಮಟ್ಟದಲ್ಲಿಯೇ ನಿರ್ವಹಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೨ (೧೭೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರ್ಮಿಕ ದತ್ತಿ (ಮುಜರಾಯಿ) ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ, ಆಯುಕ್ತರಿಗೆ ಇರುವ ಅಧಿಕಾರಗಳಾವುವು ಹಾಗೂ ಜಿಲ್ಲಾಧಿಕಾರಿಗಳಿಗೆ ಇರುವ ಅಧಿಕಾರಗಳಾವುವು ;(ಪೂರ್ಣ ವಿವರ ನೀಡುವುದು)

(ಆ) ಇಲಾಖಾ ವ್ಯಾಪ್ತಿಯ ಸಣ್ಣ ಸಣ್ಣ ಕೆಲಸಗಳ ಮಂಜೂರಾತಿಯನ್ನು ಜಿಲ್ಲಾಧಿಕಾರಿ ಹಂತದಲ್ಲೇ ಮಾಡಬಹುದಾಗಿದ್ದರೂ, ಅವುಗಳ ಕಡತವನ್ನು ಆಯುಕ್ತರ ಅನುಮೋದನೆಗಾಗಿ ಬೆಂಗಳೂರಿಗೆ ಕಳುಹಿಸಿ, ವರ್ಷಗಟ್ಟಲೇ ಕಾಯುತ್ತಿರುವುದು ಸರಿಯೇ ;

(ಇ) ಇಲಾಖೆಯ ಆಡಳಿತ ಸರಳೀಕರಣಗೊಳಿಸಲು, ಸಕಾಲ ಯೋಜನೆಯಡಿ ಇನ್ನಷ್ಟು ವಿಷಯ, ಸೇವೆಗಳನ್ನು ತರಲು ಸರ್ಕಾರ ಇಚ್ಛಿಸಿದೆಯೇ ; (ಈ ಬಗ್ಗೆ ವಿವರ ನೀಡುವುದು)

(ಈ) ಧಾರ್ಮಿಕ ದತ್ತಿ (ಮುಜರಾಯಿ) ಇಲಾಖೆಯ ಆಡಳಿತ ಸರಳೀಕರಣಕ್ಕಾಗಿ ಸರ್ಕಾರದ ಯೋಜನೆಗಳೇನು ?



## ಲಾಟರಿ ಪುನರ್ ಆರಂಭಿಸುವ ಬಗ್ಗೆ ಸರ್ಕಾರದ ನಿಲುವು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೩ (೧೭೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜೂಜಿಗೆ ಸಮನಾದ ಲಾಟರಿ ಮಾರಾಟವನ್ನು ನಿಷೇಧಿಸಿ, ಕಾನೂನನ್ನು ಜಾರಿಗೊಳಿಸಲಾಗಿದ್ದಾಗ್ಯೂ ಪುನ: ಲಾಟರಿ ಯೋಜನೆಯನ್ನು ಜಾರಿಗೆ ತರುತ್ತಿರುವುದು ನಿಜವೇ ;

(ಆ) ಹೌದಾದಲ್ಲಿ, ಇದರಿಂದ ನೆಮ್ಮದಿಯಲ್ಲಿರುವ ಬಹುತೇಕ ಬಡಕುಟುಂಬಗಳು ಮತ್ತೆ ಸಂಕಷ್ಟಕ್ಕೆ ಒಳಗಾಗುವ ಸಂಭವ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಲಾಟರಿ ಪುನರ್ ಆರಂಭದ ಬಗ್ಗೆ ಸರ್ಕಾರದ ನಿಲುವೇನು ?

## ಸಕಲೇಶಪುರ–ಗುಂಡ್ಯಾ ಗಡಿಯ ಮಧ್ಯೆ ಪೋಲೀಸ್ ಹೊರಠಾಣೆ ತೆರೆಯುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೪ (೧೭೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿರಾಡಿ ಘಾಟಿಯ ಸಕಲೇಶಪುರದ ಆರಂಭದಿಂದ ಗುಂಡ್ಯಾ ಗಡಿಯವರೆಗೆ ಯಾವುದೇ ಪೋಲೀಸ್ ಹೊರ ಠಾಣೆ ಇಲ್ಲದೆ ಇದ್ದು ಇದರಿಂದ ನಡೆಯುವ ನಿತ್ಯ ಅಪಘಾತವೂ ಸೇರಿದಂತೆ

ವಾಹನ ದಟ್ಟಣೆಯ ರಸ್ತೆ ಬ್ಲಾಕ್ ಸಂದರ್ಭದಲ್ಲಿ ಪ್ರಯಾಣಕರಿಗೆ ತೀವ್ರ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕಿದೆಯೇ ;

(ಆ) ಸದರಿ ಪ್ರದೇಶದ ಯಾವುದೇ ಮಧ್ಯಭಾಗದಲ್ಲಿ ಪೊಲೀಸ್ ಹೊರ ಠಾಣೆ ತೆರೆಯಲು ಸರ್ಕಾರ ಯೋಚಿಸಿದೆಯೇ ;

(ಇ) ಸದರಿ ಸ್ಥಳದಲ್ಲಿ ಪೊಲೀಸ್ ಹೊರ ಠಾಣೆ ಆರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ; ಮತ್ತು ಯಾವಾಗ ಹೊರ ಠಾಣೆ ಆರಂಭಿಸುವುದು ;

(ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

## ಗೃಹ ಇಲಾಖೆಯ ಕರಾವಳಿ ಕಾವಲು ಪಡೆಯ ಠಾಣೆ ನಿರ್ಮಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೫ (೧೭೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕರಾವಳಿ ಪ್ರದೇಶವಾದ ಉಳ್ಳಾಳದಿಂದ ಪ್ರಾರಂಭವಾಗಿ ಕಾರವಾರದವರೆಗೆ ಒಟ್ಟು ಎಷ್ಟು ಕರಾವಳಿ ಕಾವಲು ಪೊಲೀಸ್ ಠಾಣೆಗಳಿವೆ ;

(ಆ) ಸದರಿ ಠಾಣೆಯಲ್ಲಿ ಒಟ್ಟು ಎಷ್ಟು ಜನ ಸಿಬ್ಬಂದಿಗಳಿದ್ದಾರೆ ; ಮಂಜೂರಾದ ಮತ್ತು ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆವಾರು ವಿವರ ನೀಡುವುದು)



(ಇ) ಸದರಿ ಪೊಲೀಸ್ ಸಿಬ್ಬಂದಿಗಳಿಗೆ ಕರ್ತವ್ಯ ನಿರ್ವಹಿಸಲು ಯಾವ ರೀತಿಯ ತರಬೇತಿ ನೀಡಲಾಗುತ್ತಿದೆ ; ಸಿಬ್ಬಂದಿಗಳಿಗೆ ಒದಗಿಸಲಾಗುವ ಸಾಧನ ಪರಿಕರಗಳು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಈ) ಇನ್ನೂ ಹೆಚ್ಚಿನ ಕರಾವಳಿ ಕಾವಲು ಪಡೆಯ ಠಾಣೆಗಳನ್ನು ನಿರ್ಮಿಸಲು ಸರ್ಕಾರಕ್ಕಿರುವ ಅಡೆತಡೆಗಳೇನು ;

(ಉ) ಪೂರ್ಣ ಪ್ರಮಾಣದಲ್ಲಿ ಸ್ವಂತ ಕಟ್ಟಡದ ಠಾಣೆಗಳನ್ನು ಎಂದು ನಿರ್ಮಿಸಲಾಗುವುದು ?

## ಗುಪ್ತಚರ ಇಲಾಖೆಯ ಸಿಬ್ಬಂದಿಗಳ ನೈಪುಣ್ಯತೆ ಕೊರತೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೬ (೧೭೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಮು ಗಲಭೆ ಹಾಗೂ ಕಾನೂನು ಬಾಹಿರ ಚಟುವಟಿಕೆಗಳನ್ನು ಮೊದಲೇ ಗ್ರಹಿಸಿ ನಿಯಂತ್ರಣದಲ್ಲಿಡಲು ಗುಪ್ತಚರ ವರದಿಯ ಅಗತ್ಯವಿದ್ದು ಈ ಸಂಬಂಧ ಗುಪ್ತಚರ ಇಲಾಖೆಯ ಸಿಬ್ಬಂದಿಗಳ ಚಾಕಚಕ್ಯತೆಯ ಕೊರತೆ ಇದೆ ಎಂಬ ಸಾರ್ವತ್ರಿಕ ಆರೋಪ ನಿಜವೆ ;

(ಆ) ಹಾಗಿದ್ದಲ್ಲಿ, ಸದರಿ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಗುಪ್ತಚರ ಇಲಾಖೆಯ ಸಮಗ್ರ ಸೇವೆ ಪಡೆಯಲು ಸರ್ಕಾರದ ನಿಲುವೇನು ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಚಿಕ್ಕಪೇಟೆ ವಾರ್ಡ್‌ನಲ್ಲಿ ಪಾದಚಾರಿ ಜಾಗ ಒತ್ತುವರಿ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೧೭ (೨೪೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಚಿಕ್ಕಪೇಟೆ, ಓ.ಟಿ.ಸಿ. ರಸ್ತೆ, ನಂ:೨೦೨, ೨೦೩, ೨೦೩/೧ ವಾರ್ಡ್ ಸಂಖ್ಯೆ:೧೪೯ರಲ್ಲಿ ನಕ್ಷೆಯನ್ನು ಉಲ್ಲಂಘಿಸಿ ಮತ್ತು ನಕ್ಷೆಯಲ್ಲಿರುವ ಮೋರಿಯ ಪಾದಚಾರಿ ಜಾಗವನ್ನು ಒತ್ತುವರಿ ಮಾಡಿದ್ದಲ್ಲಿ ಕೆ.ಎ.ಟಿ., ಸಿವಿಲ್ ಕೋರ್ಟ್ ನ್ಯಾಯಾಲಯದ ಯಥಾಸ್ಥಿತಿಯನ್ನು ಉಲ್ಲಂಘಿಸಿ ನ್ಯಾಯಾಂಗ ನಿಂದನೆ ಮಾಡಿ, ಕೆ.ಎಂ.ಸಿ.ಯ ನಿಯಮಾವಳಿಗಳನ್ನು ಉಲ್ಲಂಘಿಸಿ ತೆರಿಗೆ ವಂಚನೆಯಿಂದ ಕೂಡಿರುವ ಬಹು ಹಗರಣದ ಅನಧಿಕೃತ ವಾಣಿಜ್ಯ ಮಳಿಗೆಗಳನ್ನು (ಸಂಕೀರ್ಣ) ೨೦೦೭ ರಿಂದ ಈ ದಿವಸದವರೆಗೆ ಅನಧಿಕೃತ ವಾಣಿಜ್ಯ ಉದ್ದೇಶಕ್ಕೆ ಬಳಸಿರುವ ಈ ಸಂಪೂರ್ಣ ವರದಿಗಳನ್ನು ನ್ಯಾಯಾಲಯಗಳ ಗಮನಕ್ಕೆ ತಂದಿದ್ದಾರೆಯೇ ಮತ್ತು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಮೇಲ್ಕಂಡ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ತಡೆ ಆಜ್ಞೆಯನ್ನು ತೆರವುಗೊಳಿಸಲು ಮತ್ತು ನ್ಯಾಯಾಂಗ ನಿಂದನೆ ಬಗ್ಗೆ ಸರ್ಕಾರವು ಇದುವರೆವಿಗೂ ತೆಗೆದುಕೊಂಡ ಕ್ರಮಗಳಾವುವು ;



(ಇ) ಮುಖ್ಯಮಂತ್ರಿಗಳು, ಕಾನೂನು ಸಚಿವರು, ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರು ಸೂಕ್ತ ಕ್ರಮಕ್ಕೆ ಶಿಫಾರಸ್ಸು ಮಾಡಿದ್ದರೂ ಸಹ ಇದುವರೆವಿಗೂ ಕ್ರಮ ಕೈಗೊಳ್ಳದಿರುವ ಬಿ.ಬಿ.ಎಂ.ಪಿ. ಅಧಿಕಾರಿಗಳ ಮೇಲೆ ಸರ್ಕಾರವು ತೆಗೆದುಕೊಂಡಿರುವ ಶಿಸ್ತಿನ ಕ್ರಮಗಳೇನು ;

(ಈ) ಈ ಅನಧಿಕೃತ ಕಟ್ಟಡಕ್ಕೆ ಕಮೆನ್ಸ್‌ಮೆಂಟ್, ಅಕ್ಯೂಪೆನ್ಸಿ, ಟ್ರೇಡ್ ಲೈಸೆನ್ಸ್ ಪರವಾನಗಿ ನೀಡಲಾಗಿದೆಯೇ ; ಹಾಗಿದ್ದಲ್ಲಿ, ಪ್ರತಿಗಳನ್ನು ಒದಗಿಸುವುದು ;

(ಉ) ಕಂದಾಯ ಅಧಿಕಾರಿಗಳಿಗೆ ಕಂದಾಯವನ್ನು ನಿಗದಿಪಡಿಸಕೂಡದೆಂದು ತಿಳಿಸಿದ್ದರೂ ಸಹ ಸ್ವಯಂ ಘೋಷಿತ ಅಡಿಯಲ್ಲಿ ಕಟ್ಟಿರುವ ತೆರಿಗೆಯ ಎಲ್ಲಾ ಪ್ರತಿಗಳನ್ನು ಒದಗಿಸುವುದು ? (೨೦೦೦ ರಿಂದ ೨೦೧೫ ರವರೆಗೆ)

## ಮಕ್ಕಳ ಸುರಕ್ಷತೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೧೮ (೨೮೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಾಲಾ ಮಕ್ಕಳ ಸುರಕ್ಷತೆಗಾಗಿ 'ವಿದ್ಯಾರ್ಥಿ ಪೊಲೀಸ್' ರಚನೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ;

(ಆ) ಇದ್ದಲ್ಲಿ ಈ ಯೋಜನೆಯ ರೂಪುರೇಷೆಗಳೇನು ? (ವಿವರ ನೀಡುವುದು)

## ನಗರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೧೯ (೨೯೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ನಾಗರೀಕರಿಗೆ ಕುಡಿಯುವ ನೀರನ್ನು ಒದಗಿಸಲು ರೂಪಿಸಿರುವ/ರೂಪಿಸಲು ಉದ್ದೇಶಿಸಿರುವ ಯೋಜನೆಗಳಾವುವು ?(ಪ್ರತಿ ಯೋಜನೆಗಳ ರೂಪುರೇಷೆಗಳು ಮತ್ತು ಪ್ರಗತಿಯ ವಿವರಗಳನ್ನು ನೀಡುವುದು

## ವಿಧಾನ ಸೌಧ ಆವರಣದಲ್ಲಿ ಸ್ವಾಮಿ ವಿವೇಕಾನಂದ ಹಾಗೂ ಸರ್.ಎಂ. ವಿಶ್ವೇಶ್ವರಯ್ಯನವರ ಪುತ್ಥಳಿ ಸ್ಥಾಪನೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೨೦ (೩೬೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಧಾನ ಸೌಧದ ಆವರಣದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಾನ್ ವ್ಯಕ್ತಿಗಳ ಪುತ್ಥಳಿಗಳನ್ನು ಸ್ಥಾಪಿಸಿರುವಂತೆ ಸ್ವಾಮಿ ವಿವೇಕಾನಂದ ಹಾಗೂ ಸರ್.ಎಂ. ವಿಶ್ವೇಶ್ವರಯ್ಯ ಅವರ ಪುತ್ಥಳಿಗಳನ್ನು ಸ್ಥಾಪಿಸಲಾಗುವುದೇ ;

(ಆ) ಈ ಮಹಾನ್ ವ್ಯಕ್ತಿಗಳ ಪುತ್ಥಳಿಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ;

(ಇ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?



## ಮಹಾಲೇಖಪಾಲರ ವರದಿಯ ಮೇಲೆ ತೆಗೆದುಕೊಂಡ ಕ್ರಮ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೨೨೧ (೨೪೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾಲೇಖಪಾಲರು ರಾಜ್ಯದ ಸಂಪನ್ಮೂಲ ಬಳಕೆಯ ಬಗ್ಗೆ ಪ್ರತಿ ವರ್ಷ ನೀಡಿರುವ ವರದಿಯಲ್ಲಿನ ಅಂಶಗಳ ಬಗ್ಗೆ ಸರ್ಕಾರ ಕ್ರಮಕೈಗೊಳ್ಳುತ್ತಿದೆಯೇ ;

(ಆ) ಹಾಗಿದ್ದಲ್ಲಿ, ಮಹಾಲೇಖಪಾಲರ ವರದಿಯಲ್ಲಿ ಇಲ್ಲಿಯವರೆಗೆ ಆಕ್ಷೇಪಣೆ ಮಾಡಿದ ಹಣದ ಮೊತ್ತವೆಷ್ಟು ; (ಕಳೆದ ಮೂರು ವರ್ಷಗಳ ಇಲಾಖಾವಾರು ಮಾಹಿತಿಯನ್ನು ನೀಡುವುದು)

(ಇ) ಹಣ ದುರುಪಯೋಗವಾಗಿದೆ ಎಂದು ಮಹಾಲೇಖಪಾಲರು ಆಕ್ಷೇಪಣೆ ವ್ಯಕ್ತಪಡಿಸಿದ ಪ್ರಕರಣದಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳ ಹುದ್ದೆಗಳ ವಿವರ ನೀಡುವುದು ;

(ಈ) ಆಕ್ಷೇಪಣೆಗೊಳಗಾದ ಮೊತ್ತವನ್ನು ವಸೂಲಿ ಮಾಡಲು ಕೈಗೊಂಡ ಕ್ರಮಗಳೇನು ?

## ಮಾಜಿ ಮುಖ್ಯ ಮಂತ್ರಿಗಳಿಗೆ ಅವರು ಹುಟ್ಟಿದ ದಿನದಂದು ಹಾಗೂ ನಿಧನರಾದ ದಿನದಂದು ವಿಧಾನಸೌಧದಲ್ಲಿ ಗೌರವ ಸಲ್ಲಿಸುವ ಬಗ್ಗೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೨೨೨ (೨೬೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಂಸತ್ತಿನಲ್ಲಿ ಮಾಜಿ ಪ್ರಧಾನ ಮಂತ್ರಿಗಳಿಗೆ ಅವರು ಹುಟ್ಟಿದ ಹಾಗೂ ನಿಧನರಾದ ದಿನದಂದು ಅವರ ಭಾವಚಿತ್ರಗಳಿಗೆ ಗೌರವ

ಸಲ್ಲಿಸುವ ಸಂಪ್ರದಾಯವನ್ನು ಪರಿಪಾಲಿಸಿಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದೇ ಸಂಪ್ರದಾಯವನ್ನು ರಾಜ್ಯದಲ್ಲಿ ಪಾಲಿಸಿ ವಿಧಾನಸೌಧದಲ್ಲಿ ಮಾಜಿ ಮುಖ್ಯಮಂತ್ರಿಗಳು ಹುಟ್ಟಿದ ಹಾಗೂ ನಿಧನರಾದ ದಿನಗಳಂದು ಅವರ ಭಾವಚಿತ್ರಗಳಿಗೆ ಗೌರವ ಸಲ್ಲಿಸುವ ಸಂಪ್ರದಾಯವನ್ನು ಆರಂಭಿಸಲು ಸರ್ಕಾರ ಉದ್ದೇಶಿಸಿದೆಯೇ ;

(ಇ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಸ್ತೆಗಾಗಿ ವಶಪಡಿಸಿಕೊಂಡ ಭೂಮಿಗೆ ಬದಲಿ ನಿವೇಶನ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೨೩ (೩೫೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನವಿಲ್ಲದೆ ರಸ್ತೆಗಾಗಿ ಎಷ್ಟು ಭೂಮಿಯನ್ನು ಉಪಯೋಗಿಸಿಕೊಳ್ಳಲಾಗಿದೆ ; ೨೦೧೨ ರಿಂದ ಈವರೆವಿಗೂ ಎಷ್ಟು ಪ್ರಕರಣಗಳಲ್ಲಿ ಬದಲಿ ನಿವೇಶನಗಳನ್ನು ನೀಡಲಾಗಿದೆ. ಯಾವ ಗ್ರಾಮದ ಸರ್ವೆ ನಂಬರಿನಲ್ಲಿ ರಸ್ತೆ ನಿರ್ಮಿಸಲಾಗಿದೆ ; ಇದಕ್ಕೆ ಯಾವ ಬಡಾವಣೆಯಲ್ಲಿ ಬದಲಿ ನಿವೇಶನ ನೀಡಲಾಗಿದೆ ; (ವಿವರ ನೀಡುವುದು)

(ಆ) ಭೂಸ್ವಾಧೀನವಿಲ್ಲದೆ ರಸ್ತೆಗಾಗಿ ಉಪಯೋಗಿಸಿರುವ ಜಮೀನುಗಳಿಗೆ ಈಗಾಗಲೇ ಬದಲಿ ನಿವೇಶನ ನೀಡಿದ್ದು, ಸದರಿ ರಸ್ತೆಗಾಗಿ ಉಪಯೋಗಿಸಿಕೊಂಡಿರುವ ಪ್ರದೇಶವನ್ನು ಪ್ರಾಧಿಕಾರದ ವಶಕ್ಕೆ ತೆಗೆದುಕೊಂಡಿರುವ ಬಗ್ಗೆ ಯಾವ ರೀತಿ ಕ್ರಮ ಅನುಸರಿಸಲಾಗುತ್ತಿದೆ ;



(ಇ) ಈ ಬದಲಿ ನಿವೇಶನವನ್ನು ಹೆಚ್ಚಿನ ಮಾರುಕಟ್ಟೆ ದರ ಇರುವಲ್ಲಿ ಹಾಗೂ ವಾಣಿಜ್ಯ ಜಾಗಗಳನ್ನು ನೀಡುತ್ತಿರುವುದರಿಂದ ಪ್ರಾಧಿಕಾರಕ್ಕೆ ಆಗುತ್ತಿರುವ ನಷ್ಟದ ಬಗ್ಗೆ ಸರ್ಕಾರದ ನಿಲುವೇನು ;

(ಈ) ಈಗಾಗಲೇ ಬಡಾವಣೆ ರಚನೆಗಾಗಿ ಪ್ರಾಧಿಕಾರದಿಂದ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಮಾಲೀಕರಿಗೆ ಎಕರೆಗೆ ಎಷ್ಟು ಪರಿಹಾರ ನೀಡಲಾಗಿದೆ; ಇದೇ ಬಡಾವಣೆಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನವಿಲ್ಲದೇ ರಸ್ತೆಗಾಗಿ ಉಪಯೋಗಿಸಿಕೊಳ್ಳಲಾಗಿದೆ ಎಂದು ಬದಲಿಯಾಗಿ ನೀಡಿರುವ ನಿವೇಶನಗಳ ಮಾರುಕಟ್ಟೆ ದರ ಎಷ್ಟು ?(ವಿವರ ನೀಡುವುದು)

## ರಾಜ್ಯದ ಮಧ್ಯಮ ವರ್ಗದವರಿಗೆ ಸೂರು ಕಲ್ಪಿಸುವ ಬಗ್ಗೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೨೪ (೭೮೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರದ ವತಿಯಿಂದ ಜನರ ಶ್ರೇಯೋಭಿವೃದ್ಧಿಗಾಗಿ ಚಾಲ್ತಿಯಲ್ಲಿರುವ ಯೋಜನೆಗಳು ಎಷ್ಟು ; (ಮಾಹಿತಿ ನೀಡುವುದು)

(ಆ) ಇದರಲ್ಲಿ ಮಧ್ಯಮ ವರ್ಗದವರ ಅಭಿವೃದ್ಧಿಗೆ ಇರುವ ಯೋಜನೆಗಳೆಷ್ಟು ; (ವಿವರ ನೀಡುವುದು)

(ಇ) ಮಧ್ಯಮ ವರ್ಗದವರ ಪೈಕಿ ಎಷ್ಟೋ ಜನರಿಗೆ ಸ್ವಂತ ಮನೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮಧ್ಯಮ ವರ್ಗದವರ ನೈಜ ಸ್ಥಿತಿಯನ್ನು ಕಂಡುಹಿಡಿಯಲು ಸಮೀಕ್ಷೆಯನ್ನು ನಡೆಸಲು ಸರ್ಕಾರ ಮುಂದಾಗವುದೇ ?

## ದೇವಸ್ಥಾನಗಳ ಅಭಿವೃದ್ಧಿಗೆ ನೀಡುವ ಅನುದಾನ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೨೫ (೨೫೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಅಭಿವೃದ್ಧಿಗೆ ಪ್ರತಿ ವರ್ಷದಲ್ಲೂ ಅನುದಾನ ನೀಡಲಾಗುತ್ತಿದ್ದೆಯೇ ; ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳ ಮೂಲಕ ಪ್ರತ್ಯೇಕ ಅನುದಾನ ನೀಡಲು ವ್ಯವಸ್ಥೆ ಕಲ್ಪಿಸಿದೆಯೇ ;

(ಆ) ಹಾಗಿದ್ದಲ್ಲಿ, ಯಾವ ತಿಂಗಳೊಳಗೆ ದೇವಸ್ಥಾನದ ಅಭಿವೃದ್ಧಿಗೆ ಮನವಿಯನ್ನು ಸಲ್ಲಿಸಬೇಕು ; ಎಷ್ಟು ಕೋಟಿ ಅನುದಾನವನ್ನು ಶಾಸಕರಿಗಾಗಿ ಮೀಸಲಿಟ್ಟಿದ್ದೀರಿ ? (ಸಂಪೂರ್ಣ ಮಾಹಿತಿ ನೀಡುವುದು)



## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ರಚನೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೬ (೨೮೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚನೆಗೊಂಡಿದ್ದು ಯಾವಾಗ ;

(ಆ) ರಚನೆಯ ಉದ್ದೇಶವೇನು ; ಉದ್ದೇಶ ಈಡೇರುತ್ತಿದೆಯೇ ;

(ಇ) ಇತ್ತೀಚಿನ ೩–೪ ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಎಷ್ಟು ಎಕರೆ ಭೂಮಿಯನ್ನು ಸೈಟುಗಳ ಹಂಚಿಕೆಗಾಗಿ ಸ್ವಾಧೀನ ಪಡಿಸಿಕೊಂಡಿದೆ ; (ವಿವರ ನೀಡುವುದು)

(ಈ) ಡೀ–ನೋಟಿಫಿಕೇಷನ್ ಮಾಡಿ ಖಾಸಗಿಯವರಿಗೆ ಹಂಚಿಕೆಯಾದ ಭೂಮಿ ಎಷ್ಟು ?

## ಗೃಹ ಇಲಾಖೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಧಿಕಾರಿಗಳ ಮುಂಬಡ್ತಿ.

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೭ (೨೫೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗೃಹ ಇಲಾಖೆಯಲ್ಲಿ ದಿನಾಂಕ: ೩೧–೦೭–೨೦೧೨ ರಿಂದೀಚೆಗೆ ಸುಮಾರು ೨೧೦ ಡಿ.ವೈ.ಎಸ್.ಪಿ. ಹುದ್ದೆಗೆ ಮುಂಬಡ್ತಿ ನೀಡಿರುವುದು ನಿಜವೇ ; ಹಾಗಿದ್ದಲ್ಲಿ, ಆ ಪೈಕಿ ಎಷ್ಟು ಪ.ಜಾ/ ಪ.ಪಂ.ದ ಅಧಿಕಾರಿಗಳಿಗೆ ಮುಂಬಡ್ತಿ ನೀಡಲಾಗಿದೆ ; (ವಿವರ ಒದಗಿಸುವುದು)

(ಆ) ಡಿ.ವೈ.ಎಸ್.ಪಿ. ಹುದ್ದೆಗಳಲ್ಲಿ ಎಸ್.ಸಿ./ಎಸ್.ಟಿ. ಅಧಿಕಾರಿಗಳಿಗೆ ಮೀಸಲಾಗಿರುವ ಶೇಕಡಾ ೧೫ ಮತ್ತು ಶೇಕಡಾ ೩ ಅನುಪಾತಗಳಿಗೆ ಬ್ಯಾಕ್‌ಲಾಗ್ ಮತ್ತು ಜೇಷ್ಠತೆ (seniority) ಆಧಾರದ ಮೇಲೆ ಬಡ್ತಿ ಹೊಂದಿದ ಅಧಿಕಾರಿಗಳನ್ನು ಸೇರಿಸಲಾಗಿದೆಯೇ ; ಸೇರಿಸಿದ್ದಲ್ಲಿ, ಬ್ಯಾಕ್‌ಲಾಗ್‌ನ ಎಷ್ಟು ಹುದ್ದೆಗಳನ್ನು ಸೇರಿಸಲಾಗಿದೆ ಮತ್ತು ಜೇಷ್ಠತೆ ಆಧಾರದಿಂದ ಎಷ್ಟು ಹುದ್ದೆಗಳನ್ನು ಸೇರಿಸಲಾಗಿದೆ ;(ವಿವರ ಒದಗಿಸುವುದು)

(ಇ) ಬ್ಯಾಕ್‌ಲಾಗ್ ಮತ್ತು ಜೇಷ್ಠತೆ ಆಧಾರದ ಮೇಲೆ ಬಡ್ತಿ ಹೊಂದಿದ ಅಧಿಕಾರಿಗಳನ್ನು ಹೊರತುಪಡಿಸಿ ಪ.ಜಾ/ಪ.ಪಂ. ಅಧಿಕಾರಿಗಳ ಪ್ರಮಾಣ ಶೇಕಡವಾರು ಎಷ್ಟಿದೆ ; (ಪಿ.ಐ ಮತ್ತು ಡಿ.ವೈ.ಎಸ್.ಪಿ. ಹುದ್ದೆಗಳಲ್ಲಿ ಮಾಹಿತಿಯನ್ನು ನೀಡುವುದು)

(ಈ) ಬ್ಯಾಕ್‌ಲಾಗ್ ಹುದ್ದೆಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್.೧೩ ಎಸ್‌ಆರ್‌ಆರ್ ೯೨, ದಿನಾಂಕ: ೦೧-೦೪-೧೯೯೨ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ (ವರ್ಷವಾರು) (with retrospective effect from) ಸರ್ಕಾರ ಆದೇಶ ಸಂಖ್ಯೆ: ಡಿಪಿಎಆ./೨೯/ಎಸ್‌ಬಿಸಿ/೭೭ ದಿ: ೨೭-೦೪-೧೯೭೮ (ವರ್ಷವಾರು) ಇದರ ಪ್ರಕಾರ ಪ್ರಸ್ತುತವಾಗಿ ಶೇಕಡ ೧೫ ಮತ್ತು ಶೇಕಡಾ ೩ ರ ಅನುಪಾತವನ್ನು ೧೯೭೮ ರಿಂದ ಬಡ್ತಿ ಹೊಂದಿದ ಸಾಮಾನ್ಯ ವರ್ಗದ ಅಧಿಕಾರಿಗಳ ಒಟ್ಟು ಬಡ್ತಿಯನ್ನು ಲೆಕ್ಕಹಾಕಿಕೊಂಡು ನಿಗದಿಪಡಿಸಲಾಗಿದೆಯೇ ;

(ಉ) ಹಾಗಿದ್ದಲ್ಲಿ, ೧೯೭೮ ರಿಂದ ಇತ್ತೀಚೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಯಲ್ಲಿ ಬಡ್ತಿ ನೀಡುವಾಗ ರೋಸ್ಟರ್ ನಿಯಮವಾದ ೧, ೭, ೧೪, ೨೧, ೨೮ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳಾದ ೫, ೯, ೧೧, ೧೪ ೧೮, ೨೦, ೨೧, ೨೪, ೨೬ ಇದರನ್ವಯ ಬಡ್ತಿ ನೀಡಲಾಗಿದೆಯೇ ; ನೀಡಿದ್ದಲ್ಲಿ, ಅದರ ಮಾಹಿತಿಯನ್ನು ಒದಗಿಸುವುದು (ಪಿ.ಎಸ್.ಐ. ಮತ್ತು ಡಿ.ವೈ.ಎಸ್.ಪಿ. ಹುದ್ದೆಗಳಲ್ಲಿ) ಹಾಗೂ ಸಂಖ್ಯೆ ; ಸಿಆಸುಇ/೧೨೬/ಎಸ್.ಸಿಆರ್/೮೨, ದಿನಾಂಕ: ೨೬-೧೧-೧೯೮೨ರ ಆದೇಶವನ್ನು ಅಳವಡಿಸಿಕೊಳ್ಳಲಾಗಿದೆಯೇ ? (ಅಳವಡಿಸಿಕೊಂಡಿದ್ದಲ್ಲಿ, ಮಾಹಿತಿ ನೀಡುವುದು)



## ನಕಲಿ ದಾಖಲೆ ನೀಡಿ ನಾಡಪ್ರಭು ಕೆಂಪೇಗೌಡ ಬಡಾವಣೆಯ ಕಾಮಗಾರಿ ಗುತ್ತಿಗೆ ಪಡೆದಿರುವ ಬಗ್ಗೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

**೨೨೮** (೨೫೬) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಎಷ್ಟು ಎಕರೆ ಭೂಮಿಯನ್ನು ಎಲ್ಲೆಲ್ಲಿ ಸ್ವಾಧೀನಪಡಿಸಿಕೊಂಡಿದೆ ; ಈ ಬಡಾವಣೆಯ ಕಾಮಗಾರಿ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಆ) ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಯಾವ ಯಾವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ ; ಟೆಂಡರ್‌ಗೆ ನಿಗಧಿಪಡಿಸಿರುವ ಮೊತ್ತ ಎಷ್ಟು ; (ಕಾಮಗಾರಿವಾರು ವಿವರಗಳನ್ನು ನೀಡುವುದು)

(ಇ) ಎಷ್ಟು ಜನ ಗುತ್ತಿಗೆದಾರರು ಟೆಂಡರ್ ಹಾಕಿದ್ದರು ; ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರು ಪ್ರತೀ ಕಾಮಗಾರಿಗೆ ನಮೂದಿಸಿದ್ದ ಮೊತ್ತ ಎಷ್ಟು ; ಯಾವ್ಯಾವ ಕಾಮಗಾರಿಗಳ ಟೆಂಡರ್‌ನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ ; (ಗುತ್ತಿಗೆದಾರರ ವಿಳಾಸದೊಂದಿಗೆ ವಿವರ ನೀಡುವುದು)

(ಈ) ನಕಲಿ ದಾಖಲೆಗಳನ್ನು ನೀಡಿ ಗುತ್ತಿಗೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ನಕಲಿ ದಾಖಲೆಗಳನ್ನು ನೀಡಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಯಾರು ; ಅವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರಗಳನ್ನು ನೀಡುವುದು)

## ಹೈದರಾಬಾದ್–ಕರ್ನಾಟದ ಜಿಲ್ಲೆಗಳಲ್ಲಿ ಅಕ್ರಮ ಮರಳು ಸಂಗ್ರಹ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೨೯ (೨೫೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳ ಯಾವ ಯಾವ ಸ್ಥಳಗಳಿಂದ ಮರಳು ಸರಬರಾಜಾಗುತ್ತಿದೆ ;

(ಆ) ಮರಳು ಸರಬರಾಜು ಮಾಡಲು ಇಲಾಖೆ ನಿಗಧಿಪಡಿಸಿರುವ ಮಾನದಂಡವೇನು ;

(ಇ) ಕಳೆದ ೩ ವರ್ಷಗಳಲ್ಲಿ ಸಂಗ್ರಹವಾದ ಅಕ್ರಮ ಮರಳಿನ ವಿವರ ಹಾಗೂ ಇದರಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು ?



## ವಿಧಿವಿಜ್ಞಾನ ಪ್ರಯೋಗಾಲಯದ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೩೦ (೨೮೪) ಮಾನ್ಯ ಗೃಹ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿಧಿವಿಜ್ಞಾನ ಪ್ರಯೋಗಾಲಯಗಳ ಸಂಖ್ಯೆ ಎಷ್ಟು ;(ವಿವರ ನೀಡುವುದು)

(ಆ) ಈಗಿರುವ ಎಫ್.ಎಸ್.ಎಲ್ ಯಾವುವು ; (ಇದನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ; (ವಿವರ ನೀಡುವುದು)

(ಇ) ಅಪರಾಧ ಪ್ರಕರಣದಲ್ಲಿ ಹೈದರಾಬಾದ್ ವಿಧಿ ವಿಜ್ಞಾನ ಪ್ರಯೋಗಾಲಯವನ್ನೇ ಅವಲಂಬಿಸಿರುವುದು ನಿಜವೇ ; ಹಾಗಿದ್ದಲ್ಲಿ ಕಾರಣವೇನು ;

(ಈ) ಕ್ರಿಮಿನಲ್ ಪ್ರಕರಣಗಳ ವಿಚಾರಣೆ ವಿಳಂಬವಾಗುತ್ತಿರುವುದಕ್ಕೆ ಇದು ಕಾರಣವಾಗಿದೆಯೇ ; ಹಾಗಿದ್ದಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು ? (ವಿವರ ನೀಡುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪ್ಲಾಟ್ ನಿರ್ಮಾಣದಲ್ಲಿ ಅಕ್ರಮ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೩೧ (೨೫೮) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪ್ಲಾಟ್ ನಿರ್ಮಾಣ ಯೋಜನೆಯಲ್ಲಿ ಸಾವಿರಾರು ಕೋಟಿ ಅಕ್ರಮ ನಡೆದಿರುವುದು ನಿಜವೇ ; ಹಾಗಿದ್ದಲ್ಲಿ, ಇದರಲ್ಲಿ ಶಾಮೀಲಾಗಿರುವವರ ವಿವರ ನೀಡುವುದು ;

(ಆ) ಇದುವರೆವಿಗೂ ನಿರ್ಮಾಣಗೊಂಡ ಫ್ಲಾಟ್‌ಗಳ ಸಂಖ್ಯೆ ಎಷ್ಟು ; ಹಂಚಿಕೆಯಾಗಿರುವ ಫ್ಲಾಟ್‌ಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ತಪ್ಪಿತಸ್ಥರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ; ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಮಾಸ್ಟರ್ ಪ್ಲ್ಯಾನ್ ೨೦೨೦ ಯೋಜನೆ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೩೨ (೨೫೭) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ "ಮಾಸ್ಟರ್ ಪ್ಲ್ಯಾನ್ ೨೦೨೦"ರ ಯೋಜನೆಯು ಯಾವ ಹಂತದಲ್ಲಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಹೊಸ ವಾರ್ಡ್‌ಗಳ ಸೇರ್ಪಡೆಯ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಬದಲಾವಣೆಗೊಂಡು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿ ಜನರು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)



## ರಾಜ್ಯ ಸರ್ಕಾರದ ವಿವಿಧ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೨೩೩ (೨೬೦) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ ; (ಇಲಾಖಾವಾರು ವರ್ಗೀಕರಣದೊಂದಿಗೆ ಮಾಹಿತಿ ನೀಡುವುದು)

(ಆ) ಖಾಲಿ ಇರುವ ಹುದ್ದೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು ; (ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರಗಳನ್ನು ಇಲಾಖಾವಾರು ವರ್ಗೀಕರಣದೊಂದಿಗೆ ಮಾಹಿತಿ ನೀಡುವುದು)

(ಇ) ಖಾಲಿಯಿರುವ ಬ್ಯಾಕ್‌ಲಾಗ್ ಹಾಗೂ ಇನ್ನಿತರೆ ಹುದ್ದೆಗಳನ್ನು ತುಂಬಲು ತೆಗೆದುಕೊಂಡಿರುವ ಕ್ರಮಗಳೇನು ?

## ಮಡೆಸ್ನಾನ ಆಚರಣೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೨೩೪ (೩೦೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಡೆಸ್ನಾನ ಎಂದರೆ ರಾಜ್ಯದ ಯಾವ ಯಾವ ದೇವಸ್ಥಾನಗಳಲ್ಲಿ ಯಾವ ಯಾವ ದಿವಸಗಳಲ್ಲಿ ಮಡೆ ಸ್ನಾನ ಆಚರಣೆ ಮಾಡಲಾಗುತ್ತಿದೆ ;

(ಆ) ಮಡೆಸ್ನಾನ ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿರುವ ವಕೀಲರ ಸಂಖ್ಯೆಯ ವಿವರ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೨೩೫ (೨೫೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ವಕೀಲರ ಸಂಖ್ಯೆ ಎಷ್ಟು ; ತಾಲ್ಲೂಕುವಾರು ವಿವರ ನೀಡುವುದು ಹಾಗೂ ಇವುಗಳ ಪೈಕಿ ಎಸ್.ಸಿ.ಎಸ್.ಟಿ., ಒ.ಬಿ.ಸಿ.,ಯ ವಕೀಲರ ಸಂಖ್ಯೆ ಎಷ್ಟು ;

(ಆ) ಇವರುಗಳ ಪೈಕಿ ೨೦೧೧–೧೨, ೨೦೧೨–೧೩ ಮತ್ತು ೨೦೧೩–೧೪ ವರೆಗೆ ಎಷ್ಟು ಜನ ಎಸ್.ಸಿ., ಎಸ್.ಟಿ., ಒ.ಬಿ.ಸಿ., ವಕೀಲರಿಗೆ ಸಹಾಯಧನ ಹಾಗೂ ಕಚೇರಿ ಪ್ರಾರಂಭಿಸಲು ಸಾಲ ಹಾಗೂ ಸಹಾಯಧನ ನೀಡಲಾಗಿದೆ ; ಇದಕ್ಕೆ ಅನುಸರಿಸಲಾಗುತ್ತಿರುವ ಮಾನದಂಡನೆಗಳೇನು ?

## ಅತ್ಯಾಚಾರ ಪ್ರಕರಣಗಳ ಅಂಕಿ ಅಂಶಗಳ ವಿವರ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೨೩೬ (೨೯೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ೨೦೧೨ ರಿಂದೀಚೆಗೆ ರಾಜ್ಯದಲ್ಲಿ ನಡೆದಿರುವ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಎಷ್ಟು ; ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಠಾಣೆವಾರು ಮಾಹಿತಿ ನೀಡುವುದು)



(ಆ) ಎಷ್ಟು ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ಹಾಕಲಾಗಿದೆ ; ಆ ನಂತರ ವಿಚಾರಣೆ ಮುಗಿದು ಇತ್ಯರ್ಥವಾಗಿರುವ ಪ್ರಕರಣಗಳೆಷ್ಟು ; ಅಪರಾಧಿಗಳಿಗೆ ಶಿಕ್ಷೆಯಾಗಿರುವ ಪ್ರಕರಣಗಳೆಷ್ಟು ; ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳು ಬಿಡುಗಡೆ ಹೊಂದಿರುತ್ತಾರೆ ? (ತಾಲ್ಲೂಕುವಾರು ವಿವರ)

## ಮಹಿಳಾ ಪೊಲೀಸ್ ಠಾಣೆ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೨೩೭ (೨೬೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೆಚ್ಚುವರಿಯಾಗಿ ಎಷ್ಟು ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಮತ್ತು ಎಷ್ಟು ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಬೇಡಿಕೆಯಿದೆ ;

(ಆ) ಅತ್ಯಾಚಾರ, ಮಹಿಳೆಯರ ಮೇಲಿನ ದೌರ್ಜನ್ಯ ಇತ್ಯಾದಿ ಮಹಿಳಾ ಪ್ರಕರಣಗಳನ್ನು ತುರ್ತಾಗಿ ನಿರ್ವಹಿಸಲು ಅಗತ್ಯವಿರುವ ಮಹಿಳಾ ಪೊಲೀಸ್ ಠಾಣೆಗಳನ್ನು ತೆರೆಯಲು ಮತ್ತು ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ, ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು ?

## ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿ ಹೈನುಗಾರಿಕಾ ಫಲಕಗಳು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೨೩೮ (೨೬೩) ವರಾನ್ಯ ಕಾನೂನು, ಸಂಸದೀಯು ವ್ಯವಹಾರಗಳುಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಕಳೆದ ೦೨ ವರ್ಷಗಳಿಂದ ಹೈನುಗಾರಿಕಾ ಘಟಕಗಳನ್ನು ಸ್ಥಾಪಿಸಲು ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ; ಪ್ರಸ್ತುತ ಎಷ್ಟು ಫಲಾನುಭವಿಗಳಿಗೆ ಸಹಾಯ ಧನವನ್ನು ನೀಡಲಾಗಿದೆ, ಈ ರೀತಿ ಬಂದಂತಹ ಫಲಾನುಭವಿಗಳ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ;

(ಆ) ಈ ಹೈನುಗಾರಿಕಾ ಘಟಕಗಳನ್ನು ಸ್ಥಾಪಿಸಲು ಬಂದಿರುವ ಅರ್ಜಿಗಳನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು ? (ವಿವರ ನೀಡುವುದು)

## ಪೌರ ಕಾರ್ಮಿಕರಿಗೆ ಸುರಕ್ಷತೆಗಾಗಿ ಒದಗಿಸಿರುವ ಅನುಕೂಲತೆಗಳು

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ'ಭೆಯಿಂದ ಚುನಾಯಿತರಾದವರು) :–**

೨೩೯ (೨೬೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪುರಸಭೆ, ನಗರ ಪಾಲಿಕೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ಪೌರಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲಸಗಾರರಿಗೆ ಅವರು ತಮ್ಮ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಅವರ



ಆರೋಗ್ಯ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳು ಅವರಿಗೆ ಒದಗಿಸಬೇಕಾದ ಅನುಕೂಲತೆಗಳು ಯಾವುವು ;

(ಆ) ನಗರ ಪಾಲಿಕೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಅವರ ಸುರಕ್ಷತೆ ದೃಷ್ಟಿಯಿಂದ ಈ ರೀತಿಯ ಪೂರಕ ಅನುಕೂಲತೆಗಳನ್ನು ಇದುವರೆವಿಗೂ ಒದಗಿಸದಿರುವ ನಗರಪಾಲಿಕೆ ಮತ್ತು ಮಹಾನಗರ ಪಾಲಿಕೆಗಳು ಯಾವುವು ; (ವಿವರ ನೀಡುವುದು)

(ಇ) ಈ ರೀತಿಯ ಅನುಕೂಲತೆಗಳನ್ನು ಒದಗಿಸದಿರುವ ಸ್ಥಳೀಯ ಸಂಸ್ಥೆಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕಾನೂನಾತ್ಮಕ ಕ್ರಮಗಳೇನು ;

(ಈ) ಮುಂದಿನ ದಿನಗಳಲ್ಲಿ ಈ ರೀತಿಯ ಅನುಕೂಲತೆಗಳನ್ನು ಒದಗಿಸುವುದನ್ನು ಕಡ್ಡಾಯಗೊಳಿಸಲು ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ?

## ಏಷಿಯನ್ ಪೇಂಟ್ಸ್–ಬಣ್ಣ ತಯಾರಿಕೆ ಕಂಪನಿಗೆ ಜಮೀನು.

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೪೦ (೨೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಏಷಿಯನ್ ಪೇಂಟ್ಸ್ ಕಂಪನಿಗೆ ಬಣ್ಣ ತಯಾರಿಕೆಗಾಗಿ ಸರ್ಕಾರದಿಂದ ನೀಡಲಾದ ಜಮೀನಿನ ಪ್ರಮಾಣವೆಷ್ಟು ; ಮತ್ತು ಯಾವ ಭಾಗದಲ್ಲಿ ನೀಡಲಾಗಿದೆ ;

(ಆ) ಬಣ್ಣ ತಯಾರಿಕೆ ಕಾರ್ಖಾನೆಯಿಂದ ಹೊರಬೀಳಲಿರುವ ವಿಷಯುಕ್ತ ಹಾಗೂ ತ್ಯಾಜ್ಯವಸ್ತುಗಳು ಪಕ್ಕದಲ್ಲಿ ಹರಿಯುವ ಕಬಿನಿ ನದಿಗೆ ಬಂದು ಸೇರದಂತೆ ತಡೆಯಲು ಸರ್ಕಾರ ಮುಂಜಾಗ್ರತಾ ಕ್ರಮವಾಗಿ ತೆಗೆದುಕೊಂಡ ಹಾಗೂ ತೆಗೆದುಕೊಳ್ಳಲಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಈ ಕಾರಣಕ್ಕಾಗಿ ಭೂಮಿ ಕಳೆದುಕೊಂಡ ಭೂಮಾಲೀಕರ ಕುಟುಂಬದಲ್ಲಿ ಒಬ್ಬರಿಗೆ ಕಡ್ಡಾಯವಾಗಿ ಉದ್ಯೋಗ ನೀಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ ? (ವಿವರ ನೀಡುವುದು)

## ಭಯೋತ್ಪಾದನೆ, ನಕ್ಸಲಿಸಂ ತಡೆಗಟ್ಟಲು ಪೋಲೀಸರಿಗೆ ವಿಶೇಷ ತರಬೇತಿ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೧ (೨೬೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಸಹಜ ಅಪರಾಧಗಳು ಅಂದರೆ ಭಯೋತ್ಪಾದನೆ ನಕ್ಸಲಿಸಂ, ಕೊಲೆ ಮತ್ತು ಸುಲಿಗೆಯಂತಹ ಘೋರ ಅಪರಾಧಗಳು ಹಾಗೂ ದುಷ್ಕೃತ್ಯಗಳು ಸಮಾಜ ಘಾತುಕ ದುಷ್ಟ ಶಕ್ತಿಗಳಿಂದ ನಡೆಯುತ್ತಲಿದ್ದು, ಈ ರೀತಿಯ ಅಪರಾಧಿಗಳಿಂದ ಆಗುತ್ತಿರುವ ಅಪರಾಧಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಬಗೆಯ ಅಮಾನುಷ ಕೃತ್ಯಗಳಲ್ಲಿ ತೊಡಗುವ ಅಪರಾಧಿಗಳನ್ನು ಮತ್ತು ಅಪರಾಧಗಳನ್ನು ತಡೆಗಟ್ಟುವ ಕರ್ತವ್ಯದಲ್ಲಿ ನಿರತರಾಗುವ



ಪೋಲೀಸ್ ಸಿಬ್ಬಂದಿಗೆ ವಿಶೇಷವಾದ ಪರಿಣಿತಿ, ನೈಪುಣ್ಯತೆ ಮತ್ತು ಹಲವು ಬಗೆಯ ತರಬೇತಿಗಳ ಅವಶ್ಯಕತೆಯಿದೆ ಎಂಬುದನ್ನು ಸರ್ಕಾರ ಒಪ್ಪುತ್ತದೆಯೇ ;

(ಇ) ಈ ರೀತಿಯ ಅಪರಾಧಿಗಳನ್ನು ಪತ್ತೆ ಹಚ್ಚುವ ಹಾಗೂ ಕಾನೂನು ವ್ಯಾಪ್ತಿಗೆ ತರುವ ಕಾರ್ಯದಲ್ಲಿ ಭಾಗಿಯಾಗುವ ಪೋಲೀಸ್ ಸಿಬ್ಬಂದಿಗೆ ಈ ಸಂದರ್ಭಗಳನ್ನು ವ್ಯವಸ್ಥಿತವಾಗಿ ನಿಭಾಯಿಸಲು ಅವಶ್ಯವಿರುವ ಪರಿಣಿತಿ ಹೊಂದುವುದಕ್ಕಾಗಿ ಸೂಕ್ತ ತರಬೇತಿ ನೀಡಲು ಸರ್ಕಾರ ಈವರೆಗೂ ತೆಗೆದುಕೊಂಡಿರುವ ಮತ್ತು ತೆಗೆದುಕೊಳ್ಳಲಿರುವ ಕ್ರಮಗಳಾವುವು ;

(ಈ) ದೇಶದಲ್ಲಿ ಈ ವಿಚಾರಗಳಿಗೆ ಸಂಬಂಧಿಸಿದಂತೆ ಅವಶ್ಯವಿರುವ ತರಬೇತಿ ನೀಡಲು ಗಮನಹರಿಸಿದ ರಾಜ್ಯಗಳು ಯಾವುವು ;

(ಉ) ಈ ಕಾರ್ಯಗಳಲ್ಲಿ ನಿರತರಾಗುವ ಸಿಬ್ಬಂದಿಗಳಿಗೆ ಇಲಾಖೆಯಲ್ಲಿ ಇಲಾಖಾ ಸಿಬ್ಬಂದಿಗಳಿಗೆ ಸಹಜವಾಗಿ ನೀಡಲಾಗುವ ಸವಲತ್ತು ಮತ್ತು ಅನುಕೂಲತೆಗಳನ್ನು ಹೊರತುಪಡಿಸಿ ಹೆಚ್ಚುವರಿ ಸವಲತ್ತು ಮತ್ತು ಅನುಕೂಲತೆ ಒದಗಿಸಿಕೊಡುವುದಲ್ಲದೇ ವಯೋಮಿತಿಯನ್ನು ಗಮನಲ್ಲಿರಿಸಿಕೊಂಡು ಕರ್ತವ್ಯ ನಿರ್ವಹಿಸಲು ಅನುವಾಗುವಂತೆ ಪೂರಕ ಕ್ರಮಗಳನ್ನು ಜರುಗಿಸಲು ಸರ್ಕಾರ ಚಿಂತಿಸುತ್ತಿದೆಯೇ ? (ವಿವರ ಒದಗಿಸುವುದು)

## ಅವೈಜ್ಞಾನಿಕವಾಗಿ ಬೆಳೆಯುತ್ತಿರುವ ಬೆಂಗಳೂರಿನ ಬೆಳವಣಿಗೆಯನ್ನು ನಿಯಂತ್ರಿಸಲು ಮಾರ್ಗಸೂಚಿ/ನಿಯಮಗಳನ್ನು ರೂಪಿಸುವ ಬಗ್ಗೆ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೨ (೨೬೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರಾಜಧಾನಿ ಬೆಂಗಳೂರು ನಿರೀಕ್ಷೆ ಮೀರಿ ಅತಿ ವೇಗದಲ್ಲಿ ಅವೈಜ್ಞಾನಿಕವಾಗಿ ಬೆಳೆಯುತ್ತಿದ್ದು, ಇದೇ ಪರಿಸ್ಥಿತಿ ಮುಂದುವರೆದಲ್ಲಿ ಮುಂದಿನ ದಿನಗಳಲ್ಲಿ ನಾಗರೀಕ ಸೌಲಭ್ಯ ಹಾಗೂ ಇತರೆ ಪೂರಕ ಅನುಕೂಲತೆಗಳ ಬಹುದೊಡ್ಡ ಸಮಸ್ಯೆ ಸರ್ಕಾರಕ್ಕೆ ಎದುರಾಗುವುದಿಲ್ಲವೇ ;

(ಆ) ಸದ್ಯದ ಸ್ಥಿತಿಯಲ್ಲಿ ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಹದ್ದುಬಸ್ತುಗಳನ್ನು ಗುರುತಿಸಿ ಪೂರಕ ಯೋಜನೆಗಳನ್ನು ರೂಪಿಸುವುದು ಅತ್ಯಾವಶ್ಯಕವಾಗಿರುವುದರಿಂದ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಸದ್ಯ ಬೆಂಗಳೂರು ಬೆಳೆಯುತ್ತಿರುವ ರೀತಿ ಹಾಗೂ ಮಿತಿ ಮೀರಿದ ಜನಸಂಖ್ಯೆಯ ಒತ್ತಡ ಹಾಗೂ ವಾಹನ ದಟ್ಟಣೆಯನ್ನು ಅರ್ಥಮಾಡಿಕೊಂಡು ಈ ನಗರವನ್ನು ಮುಂದಿನ ದಿನಗಳಲ್ಲಿ ನಿಯಂತ್ರಣದಲ್ಲಿರಿಸಲು ವಾಹನ ನೋಂದಣಿ ರದ್ದುಪಡಿಸುವುದು, ಹೆಚ್ಚುವರಿ ಕಂದಾಯ ಭೂಮಿಯನ್ನು ವಸತಿ ಭೂಮಿಯನ್ನಾಗಿ ಪರಿವರ್ತಿಸುವ ಪದ್ಧತಿ ಕೈಬಿಡುವುದು ಮತ್ತು ಈ ರೀತಿ



ಬೆಳೆಯುತ್ತಿರುವ ನಗರವನ್ನು ಕಡ್ಡಾಯವಾಗಿ ನಿಯಂತ್ರಣದಲ್ಲಿರಿಸಲು ತಜ್ಞರಿಂದ ವೈಜ್ಞಾನಿಕ ವರದಿ ಪಡೆದು ಅವಶ್ಯವಿರುವ ಪೂರಕ ಕ್ರಮಗಳನ್ನು ಈ ಕಾರಣಕ್ಕಾಗಿ ಜರುಗಿಸಲು ಸರ್ಕಾರ ಯೋಚಿಸುತ್ತಿದೆಯೇ ;

(ಈ) ಹಾಗಿದ್ದಲ್ಲಿ, ಈಗ ಬೆಂಗಳೂರು ಬೆಳೆಯುತ್ತಿರುವ ರೀತಿಯನ್ನು ನಿಯಂತ್ರಣದಲ್ಲಿರಿಸಲು ರಾಜ್ಯದ ಇತರೆ ನಗರಗಳು ಸಮಾನಾಂತರವಾಗಿ ಬೆಳೆಯಲು ಈ ನಗರದ ಮೇಲಿರುವ ಒತ್ತಡವನ್ನು ಬೇರೆ ಬೇರೆ ನಗರಗಳಿಗೆ ವರ್ಗಾಯಿಸಲು ಸರ್ಕಾರವು ಸೂಕ್ತ ಮಾರ್ಗಸೂಚಿ ಮತ್ತು ನಿಯಮಗಳನ್ನು ಅಳವಡಿಸಿಕೊಳ್ಳಲು ಕಾರ್ಯಪ್ರವೃತ್ತವಾಗಲಿದೆಯೇ ? (ವಿವರಗಳನ್ನು ಒದಗಿಸುವುದು)

## ಅನಧಿಕೃತ ಕಟ್ಟಡಗಳ ಸಕ್ರಮ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :–**

೨೪೩ (೨೭೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರ ಪ್ರದೇಶ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ನಿಯಮವನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು ;

(ಆ) ಈ ಹಿಂದೆ ರಾಜ್ಯ ಉಚ್ಚ ನ್ಯಾಯಾಲಯವು ಈ ನಿಯಮಗಳ ಜಾರಿಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನಿರ್ದೇಶನ ನೀಡಿದ್ದು, ಇದನ್ನು ತೆರವುಗೊಳಿಸಲಾಗಿದೆಯೇ ? (ವಿವರ ನೀಡುವುದು)

## ಬೆಂಗಳೂರು ನಗರದ ಸಿ.ಡಿ.ಪಿ. ಪ್ಲಾನ್ ಪರಿಷ್ಕರಣೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :–**

೨೪೪ (೨೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಸಿ.ಡಿ.ಪಿ. ಪ್ಲಾನ್ ಅನ್ನು ಪರಿಷ್ಕರಿಸುವ ಯೋಜನೆ ಸರ್ಕಾರಕ್ಕಿದೆಯೇ ;

(ಆ) ಇದ್ದಲ್ಲಿ, ಇದನ್ನು ಯಾವಾಗ ಮಾಡಲಾಗುವುದು ; ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಸಿ.ಡಿ.ಪಿ. ಪ್ಲಾನ್ ಪರಿಷ್ಕರಣೆ ಮಾಡದಿದ್ದರೆ ನಗರದ ಅಭಿವೃದ್ಧಿಗೆ ಧಕ್ಕೆಯಾಗುವುದಿಲ್ಲವೇ ? (ವಿವರ ಸಲ್ಲಿಸುವುದು)

## ನಗರಗಳಲ್ಲಿ ನೇಕಾರಿಕೆ ಉದ್ಯಮಕ್ಕೆ ತೊಂದರೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :–**

೨೪೫ (೨೬೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎಲ್ಲಾ ನಗರ ಪ್ರದೇಶ ಹಾಗೂ ವಸತಿ ಪ್ರದೇಶದಲ್ಲಿ ನೇಕಾರರಿಗೆ ವಿದ್ಯುತ್ ಮಗ್ಗ ಹಾಕಲು ಅನುಮತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇತ್ತೀಚಿನ ಕಾನೂನು ಅನ್ವಯ ಝೋನಲ್ ರೆಗ್ಯುಲೇಷನ್ ಮಾಡುವಾಗ ಆಗಿರುವ ದೋಷವನ್ನು ಸರಿಪಡಿಸಿ ನೇಕಾರರಿಗೆ ನ್ಯಾಯ ಕೊಡಲಾಗುವುದೇ ;



(ಇ) ಅನೇಕ ಶಬ್ದಮಾಲಿನ್ಯದಿಂದ ಕೂಡಿರುವ ನಗರಗಳಲ್ಲಿ ಕೇವಲ ನೇಕಾರಿಕೆ ಮಾಡುವ ಶಬ್ದ ತೊಂದರೆ ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ;

(ಈ) ಕೂಡಲೇ ಝೋನಲ್ ರೆಗ್ಯುಲೇಷನ್ ಅನ್ನು ಸರಳೀಕರಿಸಿ ಆದೇಶ ಮಾಡಿ ನೇಕಾರರಿಗೆ ಅನುಕೂಲ ಯಾವಾಗ ಮಾಡಿಕೊಡಲಾಗುವುದು ?

## ಮುಜರಾಯಿ ಇಲಾಖೆಗೆ ಹೆಚ್ಚು ಹಣ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :–**

೨೪೬ (೨೭೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು ಹಾಗೂ ಮುಜರಾಯಿಯೇತರ ದೇವಸ್ಥಾನಗಳೆಷ್ಟು ;

(ಆ) ಕಳೆದ ಆಯವ್ಯಯದಲ್ಲಿ ಮುಜರಾಯಿ ಇಲಾಖೆಗೆ ನೀಡಿರುವ ಅನುದಾನವೆಷ್ಟು ;

(ಇ) ಕಳೆದ ಎರಡು ವರ್ಷಗಳಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳಿಂದ ದೇವಸ್ಥಾನದ ಅಭಿವೃದ್ಧಿಗೆ ಬೇಡಿಕೆ ಬಂದಿರುವುದೆಷ್ಟು ; ಅವು ಯಾವುವು ;

(ಈ) ಬಂದಿರುವ ಬೇಡಿಕೆಗೆ ತಕ್ಕಂತೆ ಅನುದಾನ ಬಿಡುಗಡೆ ಮಾಡಲಾಗಿದೆಯೆ ; ಬಿಡುಗಡೆ ಮಾಡದಿರಲು ಕಾರಣವೇನು ;

(ಉ) ಹಾಗಿದ್ದಲ್ಲಿ, ಈ ವರ್ಷದ ಆಯವ್ಯಯದಲ್ಲಿ ಬೇಡಿಕೆಗೆ ತಕ್ಕಂತೆ ಎಲ್ಲಾ ದೇವಸ್ಥಾನಗಳ ಅಭಿವೃದ್ಧಿಗೆ ಹಣ ಒದಗಿಸಲಾಗುವುದೇ?

## ಶ್ರೀ ಗವಿರಂಗನಾಥಸ್ವಾಮಿ ದೇವಸ್ಥಾನದ ಅಭಿವೃದ್ಧಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :–**

೨೪೭ (೨೭೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಗವಿರಂಗಾಪುರದಲ್ಲಿರುವ ಪ್ರಸಿದ್ಧ ಶ್ರೀ ಗವಿರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ದೇವಸ್ಥಾನದ ಅಡುಗೆ ಮನೆ ಹಾಗೂ ಕಟ್ಟಡದ ನಿರ್ವಹಣೆ ಅಲ್ಲದೆ ದೇವಸ್ಥಾನದ ಆವರಣವನ್ನು ಸ್ವಚ್ಛವಾಗಿಡುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ; ಈವರೆವಿಗೂ ದೇವಾಲಯಕ್ಕೆ ಬಂದಿರುವ ಆದಾಯದಲ್ಲಿ ಈ ಕೆಲಸಗಳನ್ನು ಮಾಡದಿರಲು ಕಾರಣವೇನು ; ಕೂಡಲೇ ಸಂಬಂಧಪಟ್ಟವರಿಗೆ ಆದೇಶ ಮಾಡಲಾಗುವುದೇ ;

(ಈ) ರಾಜಗೋಪುರಕ್ಕೆ ಇದುವರೆಗೆ ತೆಗೆದುಕೊಂಡಿರುವ ಕ್ರಮಗಳೇನು; ಸರ್ಕಾರಕ್ಕೆ ಕಡತ ಮಂಡಿಸಲಾಗಿದೆಯೇ ?



## ದುರ್ಗಾ ಪೊಲೀಸ್ ಮಹಿಳಾ ಸಹಾಯವಾಣಿ ಸಂಚಾರಿ ವಾಹನಕ್ಕೆ ಪ್ರಚಾರದ ಕೊರತೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೮ (೨೭೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಮ್ಮ ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಪ್ರಾರಂಭಿಸಿದ್ದು ದುರ್ಗಾ ಪೊಲೀಸ್ ಮಹಿಳಾ ಸಹಾಯವಾಣಿ ಸಂಚಾರಿ ವಾಹನಕ್ಕೆ ಪ್ರಚಾರದ ಕೊರತೆಯಿಂದ ಸಾರ್ವಜನಿಕರಿಗೆ ಲಭ್ಯವಾಗದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಇರುವ ಸಹಾಯವಾಣಿಗೆ ಪ್ರಚಾರ ಮಾಡಲು ಕೈಗೊಂಡ ಕ್ರಮಗಳೇನು ;

(ಇ) ಇದು ಸ್ಥಾಪನೆಯಾದಾಗಿನಿಂದ ಬಂದ ದೂರುಗಳ ಸಂಖ್ಯೆ ಎಷ್ಟು; ಕ್ರಮ ಜರುಗಿಸಲಾಗಿರುವ ದೂರುಗಳ ಸಂಖ್ಯೆ ಎಷ್ಟು ; ಕೈಗೊಂಡಿರುವ ಕ್ರಮಗಳಾವುವು ? (ವಿವರ ನೀಡುವುದು)

## ಕೃಷ್ಣಾ ನದಿ ತೀರದಲ್ಲಿ ಅಕ್ರಮ ಮರಳು ಧಂದೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೯ (೨೭೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಉತ್ತರ ಕರ್ನಾಟಕದ ಜೀವ ನದಿಯಾದ ಕೃಷ್ಣಾ ನದಿಯ ತೀರದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅಕ್ರಮ ಮರಳು ಧಂದೆಯೂ ಯಾಂತ್ರೀಕೃತ ದೋಣಿಗಳ ಮೂಲಕ ಅವ್ಯಾಹತವಾಗಿ

ನಡೆಯುತ್ತಿದೆ. ಇದರಿಂದ ಕೃಷ್ಣಾ ನದಿಯ ನೀರು ಕಲುಷಿತವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರವು ಅಕ್ರಮ ಮರಳು ಧಂದೆ ತಡೆಯುವಲ್ಲಿ ಕೈಗೊಂಡ ಕ್ರಮಗಳೇನು ;

(ಇ) ಇಲ್ಲಿಯವರೆಗೆ ಎಷ್ಟು ಜನರನ್ನು ಬಂಧಿಸಲಾಗಿದೆ ; ಮತ್ತು ಅವರ ಮೇಲೆ ಕೈಗೊಂಡ ಕಾನೂನು ಕ್ರಮಗಳೇನು ;

(ಈ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗಿರುವ ಹಣ ಎಷ್ಟು ;

(ಉ) ಯಾಂತ್ರೀಕೃತ ದೋಣಿಗಳ ಮೂಲಕ ಮರಳನ್ನು ಸಾಗಿಸಲಾಗುತ್ತಿದೆ ಇದರಿಂದ ಕೃಷ್ಣಾ ನದಿಯ ನೀರು ಕುಲಷಿತಗೊಳ್ಳುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

## ಮಹಾನಗರ ಪಾಲಿಕೆಗಳಲ್ಲಿ "ಸ್ವಚ್ಛ ಭಾರತ ಅಭಿಯಾನ"

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೦ (೨೭೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಹಾನಗರ ಪಾಲಿಕೆಗಳಲ್ಲಿ ಪೌರ ಕಾರ್ಮಿಕರ ಹುದ್ದೆಗಳು ಖಾಲಿ ಇರುವುದರಿಂದ ಪಟ್ಟಣಗಳು ಸ್ವಚ್ಛ ಭಾರತ ಅಭಿಯಾನದಡಿ ಸ್ವಚ್ಛತೆ ಮಾಡುವಲ್ಲಿ ವ್ಯತ್ಯಯವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರವು ಇದನ್ನು ಬಗೆಹರಿಸಲು ಕೈಗೊಂಡ ಕ್ರಮಗಳೇನು ;



(ಇ) ನಮ್ಮ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಒಟ್ಟು ಮಂಜೂರಾದ ಪೌರಕಾರ್ಮಿಕರ ಹುದ್ದೆಗಳೆಷ್ಟು ; (ಪ್ರತ್ಯೇಕವಾಗಿ ಮಾಹಿತಿ ಸಲ್ಲಿಸುವುದು)

(ಈ) ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಹುದ್ದೆಗಳು ಖಾಲಿ ಇರುವ ಹುದ್ದೆಗಳೆಷ್ಟು ; (ಪ್ರತ್ಯೇಕವಾಗಿ ಮಾಹಿತಿ ಸಲ್ಲಿಸುವುದು)

(ಉ) ಖಾಲಿ ಇರುವ ಪೌರ ಕಾರ್ಮಿಕರ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡುವಿರಿ ?

## ಬೆಳಗಾವಿ ನಗರವನ್ನು ಸ್ಮಾರ್ಟ್ ಸಿಟಿಯನ್ನಾಗಿ ನಿರ್ಮಾಣ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೧ (೨೭೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಮ್ಮ ರಾಜ್ಯದ ಎರಡನೆಯ ರಾಜಧಾನಿ ಎಂದು ಕರೆಸಿಕೊಳ್ಳುತ್ತಿರುವ ಬೆಳಗಾವಿ ಮಹಾನಗರವನ್ನು ಸ್ಮಾರ್ಟ್ ಸಿಟಿಯನ್ನಾಗಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರವು ಕ್ರಿಯಾ ಯೋಜನೆ ಸಿದ್ಧಪಡಿಸಿದೆಯೇ;

(ಇ) ಅದಕ್ಕೆ ತಗಲುವ ವೆಚ್ಚವೆಷ್ಟು ; ಸ್ಮಾರ್ಟ್ ಸಿಟಿಯನ್ನಾಗಿಸಲು ಇರುವ ಮಾನದಂಡಗಳೇನು ;

(ಈ) ಸ್ಮಾರ್ಟ್ ಸಿಟಿಯನ್ನಾಗಿ ನಿರ್ಮಾಣ ಮಾಡಲು ಕೇಂದ್ರ ಸರ್ಕಾರದ ಮಾನದಂಡಗಳೇನು ಹಾಗೂ ಯಾವ ಕಾಲಮಿತಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳುವಿರಿ ?

## ಶಿವಮೊಗ್ಗ ಮಹಾನಗರ ಪಾಲಿಕೆಗೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೨ (೨೮೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ನಗರ ಸಭೆಯನ್ನು ಮಹಾನಗರ ಪಾಲಿಕೆಯಾಗಿ ಉನ್ನತೀಕರಿಸಿದ ನಂತರ ೨೦೧೩–೧೪, ೨೦೧೪–೧೫ ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದ ಮೊತ್ತ ಎಷ್ಟು ; (ವಿವರ ನೀಡುವುದು)

(ಆ) ಬಿಡುಗಡೆಯಾದ ಅನುದಾನದ ಬಾಬ್ತಿನಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ; (ವಿವರ ನೀಡುವುದು)

(ಇ) ಈ ಪೈಕಿ ಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು ? (ವಿವರ ನೀಡುವುದು)

## ಮೈಸೂರು ನಗರದಲ್ಲಿ ಅಪರಾಧ ಪ್ರಕರಣಗಳ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೩ (೨೮೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರದಲ್ಲಿ ಕಳೆದ ಮೂರು ತಿಂಗಳಲ್ಲಿ ನಡೆದಿರುವ ವಿವಿಧ ಬಗೆಯ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು ; (ವಿವರಗಳನ್ನು ಒದಗಿಸುವುದು) ಇವುಗಳಲ್ಲಿ ಚಿನ್ನದ ಸರಗಳ್ಳತನ ಪ್ರಕರಣಗಳ ಸಂಖ್ಯೆ ಎಷ್ಟು ; ಪೊಲೀಸ್ ಸಿಬ್ಬಂದಿ ಕೊರತೆಯಿಂದ ಅಪರಾಧ ಪ್ರಕರಣಗಳಲ್ಲಿ ಏರಿಕೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಮೈಸೂರು ನಗರದಲ್ಲಿ ಇದೇ ಜನವರಿ ತಿಂಗಳಲ್ಲಿ ಒಂದೇ ದಿನ ೫ ಚಿನ್ನದ ಸರಗಳ್ಳತನ ೨ ಸರಗಳ್ಳತನಕ್ಕೆ ಪ್ರಯತ್ನ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮೈಸೂರು ನಗರದಲ್ಲಿ ವಿವಿಧ ಪೊಲೀಸ್ ಠಾಣೆಗಳಲ್ಲಿ ಖಾಲಿಯಿರುವ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ ಎಷ್ಟು, ಈ ಹುದ್ದೆಗಳನ್ನು ಭರ್ತಿ ಮಾಡಿ, ಹೊಸ ಹುದ್ದೆಗಳನ್ನು ಸೃಷ್ಟಿಸಿ, ಸೂಕ್ತ ಬಂದೋಬಸ್ತ್ ಮಾಡುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ?

## ಮಲೆಮಹದೇಶ್ವರ ಬೆಟ್ಟದ ಅಂತರಗಂಗೆಯನ್ನು ಸ್ವಚ್ಛಗೊಳಿಸುವಿಕೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೪ (೨೯೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಲೆಮಹದೇಶ್ವರ ಬೆಟ್ಟದ ಮೇಲಿನ ಅಂತರಗಂಗೆ ತೀರ್ಥವು ಕೊಳಚೆ ನೀರಿನಿಂದ ತುಂಬಿಕೊಂಡಿದ್ದು ಗಿಡಗಂಟೆಗಳು ಬೆಳೆದುಕೊಂಡು ಸ್ವಚ್ಛತೆ ಇಲ್ಲದಿರುವುದರಿಂದ ಸ್ನಾನ ಮಾಡುವ ಭಕ್ತಾದಿಗಳು ಚರ್ಮರೋಗಕ್ಕೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಅಂತರಗಂಗೆ ತೀರ್ಥವನ್ನು ಸ್ವಚ್ಛಗೊಳಿಸಿ ಶುದ್ಧವಾದ ನೀರು ಹರಿಯುವಂತೆ ಮಾಡಲು ಬೇಸಿಗೆ ಮತ್ತು ಜಾತ್ರೆ ಸಮಯದಲ್ಲಿ

ಭಕ್ತಾದಿಗಳ ಅನುಕೂಲಕ್ಕೆ ಕೃತಕವಾಗಿ ನೀರು ಹರಿಸಲು ಕ್ರಮ ಜರುಗಿಸಲಾಗುವುದೇ ;

(ಇ) ಶಿವರಾತ್ರಿ ಮತ್ತು ಯುಗಾದಿ ಜಾತ್ರೆ ಸಮಯದಲ್ಲಿ ಬರುವ ಭಕ್ತಾದಿಗಳ ಅನುಕೂಲಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಸ್ನಾನಗೃಹ, ಶೌಚಾಲಯ, ತಂಗಲು ಡೇರೆಗಳು, ಸಿ.ಸಿ.ಟಿ.ವಿ. ಅಳವಡಿಕೆ, ಕುಡಿಯುವ ನೀರು ಹಾಗೂ ವಾಹನ ನಿಲುಗಡೆಯನ್ನು ವ್ಯವಸ್ಥಿತಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ವಿಜಯಪುರದ ಮುಳುವಾಡಿ ಇಂಡಸ್ಟ್ರಿಯಲ್ ಏರಿಯಾದ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೫೫ (೨೯೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ಜಿಲ್ಲೆಯ ಮುಳುವಾಡಿ ಇಂಡಸ್ಟ್ರಿಯಲ್ ಏರಿಯಾಗಾಗಿ ಎಷ್ಟು ವಿಸ್ತೀರ್ಣದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ ;

(ಆ) ಸ್ವಾಧೀನಕ್ಕೆ ಪ್ರತಿ ಎಕರೆಗೆ ನಿಗಧಿಪಡಿಸಿದ ಬೆಲೆ ಎಷ್ಟು ;

(ಇ) ಈ ಜಮೀನಿನಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ 'ಅ ಮತ್ತು ಬ' ಪೋರ್ಟ್ ಖರಾಬು ಹೊಂದಿದೆ ;

(ಈ) ಇಲ್ಲಿ ಯಾವ ಯಾವ ಕೈಗಾರಿಕೆ ಸ್ಥಾಪನೆಗೆ ಯಾವ ಯಾವ ಕಂಪನಿಗಳು ಮುಂದೆ ಬಂದಿವೆ ? (ವಿವರ ನೀಡುವುದು)



## ಕೆ.ಐ.ಎ.ಡಿ.ಬಿ. ಯಿಂದ ಅಭಿವೃದ್ಧಿ ಪಡಿಸಿದ ಜಮೀನುಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೫೬ (೩೦೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ (ಕೆ.ಐ.ಎ.ಡಿ.ಬಿ.) ಯಿಂದ ಎಷ್ಟು ವಿಸ್ತೀರ್ಣದ ಜಮೀನನ್ನು ಇಲ್ಲಿಯವರೆಗೆ ಅಭಿವೃದ್ಧಿ ಪಡಿಸಲಾಗಿದೆ ;

(ಆ) ಅಭಿವೃದ್ಧಿ ಪಡಿಸಲಾಗುತ್ತಿರುವ ಜಮೀನಿನ ವಿಸ್ತೀರ್ಣ ಎಷ್ಟು ;

(ಇ) ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ಜಮೀನಿನ ವಿಸ್ತೀರ್ಣ ಎಷ್ಟು ;

(ಈ) ಇದರಲ್ಲಿ ಕೈಗಾರಿಕೆಗಳಿಗೆ ಒದಗಿಸಲಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು ಯಾವ ಕೈಗಾರಿಕೆಗಳಿಗೆ ಎಷ್ಟು ಜಮೀನನ್ನು ಒದಗಿಸಲಾಗಿದೆ; (ವಿವರ ನೀಡುವುದು)

(ಉ) ಆರಂಭವಾಗಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು ; ಈವರೆವಿಗೂ ಕೈಗಾರಿಕೆ ಆರಂಭವಾಗದೇ ಇರುವ ಜಮೀನಿನ ವಿಸ್ತೀರ್ಣ ಎಷ್ಟು;

(ಊ) ವಿಜಯಪುರ/ಬಾಗಲಕೋಟೆ, ಬೆಳಗಾವಿ ನಗರಕ್ಕೆ ಹೊಂದಿಕೊಂಡ ಹಂಚಿಕೆಯಾಗದೇ ಬಾಕಿ ಉಳಿದ ಕೈಗಾರಿಕಾ ವಸಾಹತುಗಳಲ್ಲಿ ಕೈಗಾರಿಕಾ ನಿವೇಶನಗಳ ವಿವರ ನೀಡುವುದು ?

## ಆರಕ್ಷಕ ಅಧಿಕಾರಿಗಳಿಗೆ ಒದಗಿಸಿರುವ ವಾಹನಗಳ ಸ್ಥಿತಿಗತಿ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೫೭ (೩೦೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಆರಕ್ಷಕ ಅಧಿಕಾರಿಗಳಿಗೆ ಒದಗಿಸಿರುವ ವಾಹನಗಳು ಯಾವುವು ;

(ಆ) ಅವುಗಳ ತಯಾರಿಕಾ ದಿನಾಂಕ (MODEC) ಮತ್ತು ಓಡಿದ ಕಿ.ಮೀ. ಎಷ್ಟು ;

(ಇ) ಅವುಗಳ ಸ್ಥಿತಿಗತಿ ಏನು ; ದುರಸ್ಥಿಗೆ ಇರುವಂತಹ ವಾಹನಗಳು ಯಾವುವು ;

(ಈ) ಇವುಗಳ ನಿರ್ವಹಣೆಗೆ ಇರುವ ನಿಯಮ ಹಾಗೂ ಕ್ರಮಗಳು ಏನು ? (ಈ ಮೇಲಿನ ಎಲ್ಲಾ ಮಾಹಿತಿಗಳನ್ನು ತಾಲ್ಲೂಕುವಾರು, ಠಾಣಾವಾರು ವಿವರ ನೀಡುವುದು)

## ರಾಜ್ಯದಲ್ಲಿನ ಕೋಳಿ ಫಾರಂಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೫೮ (೩೦೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವಂತಹ ಕೋಳಿ ಫಾರ್ಮ್‌ಗಳ ಸಂಖ್ಯೆ ಎಷ್ಟು ;

(ಆ) ಪ್ರತಿ ದಿನ ಕೋಳಿ ಮಾಂಸದ ಬೇಡಿಕೆ ಪ್ರಮಾಣ ಎಷ್ಟು ; (ವಿವರ ನೀಡುವುದು)



(ಇ) ಈ ಕೋಳಿ ಫಾರ್ಮ್‌ಗಳಲ್ಲಿ ಹಾರ್ಮೋನ್ ಹಾಗೂ ಆಂಟಿ ಬಯೋಟಿಕ್ ಬಳಕೆಗೆ ನಿಗದಿಪಡಿಸಿರುವ ಮಾನದಂಡಗಳೇನು; ಅದರ ಪರಿಶೀಲನೆಗೆ ಸರ್ಕಾರದ ಕ್ರಮವೇನು ?

## ರಾಜ್ಯದ ಕಾನೂನು ಕಾಲೇಜುಗಳನ್ನು ಅನುದಾನಕ್ಕೊಳಪಡಿಸುವ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೫೯ (೨೯೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎಷ್ಟು ಕಾನೂನು ಕಾಲೇಜುಗಳನ್ನು ಅನುದಾನಕ್ಕೊಳಪಡಿಸಲು ಉದ್ದೇಶಿಸಲಾಗಿದೆ ; ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ ; (ಕಾಲೇಜುವಾರು ವಿವರ ಒದಗಿಸುವುದು)

(ಆ) ಈ ಕಾಲೇಜುಗಳನ್ನು ಅನುದಾನಕ್ಕೊಳಪಡಿಸಲು ಇರುವ ನಿಯಮಾವಳಿಗಳು ಏನು ? (ವಿವರ ನೀಡುವುದು)

## ರಾಜ್ಯದಲ್ಲಿ ವಾಸವಾಗಿರುವ ಅಕ್ರಮ ವಲಸೆಗಾರರು

**ಪ್ರೊ. ಪಿ.ವಿ. ಕೃಷ್ಣಭಟ್ಟ (ನಾಮನಿರ್ದೇಶನ ಹೊಂದಿದವರು) :–**

೨೬೦ (೨೯೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪಾಸ್‌ಪೋರ್ಟ್ ಇಲ್ಲದೆಯೆ ವಾಸವಾಗಿರುವ ವಿದೇಶಿಯರ ಸಂಖ್ಯೆ ಎಷ್ಟು ; ಎಷ್ಟು ಜನರನ್ನು ಬಂಧಿಸಲಾಗಿದೆ; ಈ ಕುರಿತು ದಾಖಲಾಗಿರುವ ಪ್ರಕರಣಗಳು ಎಷ್ಟು ; (ವಿವರ ನೀಡುವುದು)

(ಆ) ಅವರನ್ನು ಬಂಧಿಸಲು ಕೈಗೊಂಡಿರುವ ಕ್ರಮಗಳೇನು ; ಬಂಧಿತರು ಮೂಲತಃ ಯಾವ ಯಾವ ದೇಶದವರು ;

(ಇ) ಈ ಕುರಿತು ಎಷ್ಟು ಪ್ರಕರಣಗಳು ಸಾಬೀತಾಗಿವೆ ? (ಆಗಿದ್ದಲ್ಲಿ, ಶಿಕ್ಷೆಯ ವಿವರ ತಿಳಿಸುವುದು)

## ಹಾಸನದಲ್ಲಿ ರೈಲ್ವೇ ಹಳಿಗೆ ಮೇಲ್ಸೇತುವೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೬೧ (೨೯೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ನೂತನ ಬಸ್ ನಿಲ್ದಾಣದ ಹತ್ತಿರ ಹಾದು ಹೋಗಿರುವ ರೈಲ್ವೇ ಹಳಿಗೆ ಮೇಲ್ಸೇತುವೆ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಹಾಸನದ ಎನ್.ಆರ್. ಸರ್ಕಲ್‌ನಿಂದ ನೂತನ ಬಸ್ ನಿಲ್ದಾಣದವರೆಗೆ ಅಧಿಕ ವಾಹನ ದಟ್ಟಣೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ರಸ್ತೆಯನ್ನು ಅಗಲೀಕರಣ ಮಾಡಲು ಕೈಗೊಂಡಿರುವ ಕ್ರಮಗಳೇನು ;

(ಇ) ಹಾಸನದ ರೈಲು ನಿಲ್ದಾಣದಿಂದ ಡೈರಿ ವೃತ್ತದವರೆಗೆ ಬೀದಿ ದೀಪಗಳಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಬೀದಿ ದೀಪ ಅಳವಡಿಸಲು ಕೈಗೊಂಡಿರುವ ಕ್ರಮಗಳೇನು ?



## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೬೨ (೨೯೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ ನಡೆದಿರುವುದು ಮತ್ತು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅಂತಹ ಕಾಮಗಾರಿಗಳ ಸಂಖ್ಯೆ ಎಷ್ಟು ; ಎಷ್ಟು ಕಾಮಗಾರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ ; ಅದರಲ್ಲಿ ಎಷ್ಟು ಕಳಪೆ ಕಾಮಗಾರಿಗಳನ್ನು ಪತ್ತೆ ಹಚ್ಚಲಾಗಿದೆ ; ಸದರಿ ಪ್ರಕರಣಗಳಲ್ಲಿ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ ; (ವಿವರ ನೀಡುವುದು)

(ಇ) ನಿಜವಾಗಿದ್ದರೆ, ಅಂತಹ ಕಾಮಗಾರಿಗಳ ಒಟ್ಟು ಮೊತ್ತವೆಷ್ಟು ; ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ತೆಗೆದುಕೊಂಡಿರುವ ಕ್ರಮವೇನು ; ಕಳಪೆ ಕಾಮಗಾರಿಯನ್ನು ಗುಣಮಟ್ಟಕ್ಕೆ ಸರಿಮಾಡಲು ತಗಲುವ ವೆಚ್ಚವೆಷ್ಟು ;

(ಈ) ಈ ಕಳಪೆ ಕಾಮಗಾರಿಯ ನಷ್ಟವನ್ನು ಗುತ್ತಿಗೆದಾರರಿಂದ ಮತ್ತು ಅಧಿಕಾರಿಗಳಿಂದ ವಸೂಲಿ ಮಾಡಲು ಸರ್ಕಾರ ಕ್ರಮ ಜರುಗಿಸಿದೆಯೇ ? (ಪೂರ್ಣ ವಿವರ ನೀಡುವುದು)

## ನಗರ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ವಿವಿಧ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಜಮೀನು ಮಂಜೂರು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೬೩ (೩೦೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರ ಮತ್ತು ಮಹಾನಗರಗಳ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಜಮೀನು ಮಂಜೂರಾತಿ ಕೋರಿ ಬಂದಿರುವ ಮನವಿಗಳ ಸಂಖ್ಯೆ ಎಷ್ಟು ;

(ಆ) ಅವುಗಳ ಪೈಕಿ ಜಮೀನು ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಸರಳ ಮಂಜೂರಾತಿಗೆ ಕಾನೂನು ರೂಪಿಸುವುದು ಅವಶ್ಯಕವಲ್ಲವೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಅತ್ಯಾಚಾರದಂತಹ ಗಂಭೀರ ಪ್ರಕರಣಗಳು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೬೪ (೩೨೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅತ್ಯಾಚಾರದಂತಹ ಗಂಭೀರ ಪ್ರಕರಣಗಳ ವಿಚಾರಣೆ ನಡೆಸಲು ವಿಳಂಬಗೊಳ್ಳುವುದರಿಂದ ಅಪರಾಧಿಗಳಿಗೆ ಶಿಕ್ಷೆಯಿಂದ ಬಿಡುಗಡೆಗೊಳ್ಳಲು ಕಾರಣವಾಗುತ್ತದೆ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)



(ಆ) ಹೆಣ್ಣು ಮಕ್ಕಳ ಮೇಲೆ ನಡೆದಿರುವಂತಹ ಅತ್ಯಾಚಾರ ಮತ್ತು ದೌರ್ಜನ್ಯಗಳಂತಹ ಗಂಭೀರ ಪ್ರಕರಣಗಳ ವಿಚಾರಣೆಗಾಗಿ ಪ್ರತ್ಯೇಕ ನ್ಯಾಯಾಲಯ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಇ) ಕಳೆದ ೨ ವರ್ಷಗಳಲ್ಲಿ ಮಹಿಳೆ ಮತ್ತು ಮಕ್ಕಳ ಮೇಲೆ ನಡೆದ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳೆಷ್ಟು ; ಎಷ್ಟು ಪ್ರಕರಣಗಳಿಗೆ ಅಂತಿಮ ವರದಿ ಸಲ್ಲಿಸಲಾಗಿದೆ ; ಶಿಕ್ಷೆಗೆ ಒಳಪಡಿಸಲಾದ ಪ್ರಕರಣಗಳೆಷ್ಟು ? (ವಿವರ ನೀಡುವುದು)

## ಮಂಗಳೂರು ಮಹಾನಗರ ಪಾಲಿಕೆಯ ಸ್ವಯಂ ಘೋಷಣೆ ಆಸ್ತಿ ತೆರಿಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೬೫ (೩೨೨) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ಮಹಾನಗರ ಪಾಲಿಕೆ ಪ್ರತಿ ೩ ವರ್ಷಕ್ಕೊಮ್ಮೆ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪ್ರಸ್ತಾವನೆಯನ್ನು ರದ್ದು ಮಾಡಬೇಕೆಂದು ನಗರ ಪಾಲಿಕೆ ಪರಿಷತ್, ಸರ್ವಾನುಮತದ ತೀರ್ಮಾನ ಕೈಗೊಂಡು ಇಲಾಖೆಗೆ ಕಳುಹಿಸಲಾಗಿದ್ದು, ಅದನ್ನು ಪರಿಗಣಿಸದೆ ಇರಲು ಕಾರಣಗಳೇನು ; (ವಿವರ ನೀಡುವುದು)

(ಆ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ ೩ ವರ್ಷಗಳಲ್ಲಿ ೫೦% ಕ್ಕಿಂತಲೂ ಕಡಿಮೆ ಬಳಕೆದಾರರಿಂದ ತೆರಿಗೆ ಸ್ವಯಂ ಘೋಷಿತ ಆಸ್ತಿ, ನೀರಿನ ಬಿಲ್ಲು ವಸೂಲಿ ಮಾಡಲಿ ಎಂದು ವರದಿ ನೀಡಿರುವುದು ನಿಜವೇ ; ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ನಗರ ಪಾಲಿಕೆ ವ್ಯಾಪ್ತಿಯಲ್ಲಿ ತಾತ್ಕಾಲಿಕ ಮನೆ ನಂಬರ್ ನೀಡಿ ಆಸ್ತಿ ತೆರಿಗೆ ಮತ್ತು ನೀರಿನ ಬಿಲ್ಲನ್ನು ಪಾವತಿಸದೇ ಅನೇಕ ವರ್ಷಗಳಿಂದ ಬಾಕಿ ಇಟ್ಟಿರುವುದು ನಿಜವೇ ; ಈ ಬಗ್ಗೆ ಕೈಗೊಂಡ ಕ್ರಮಗಳೇನು ;

(ಈ) ನೀರಿನ ಬಿಲ್ಲನ್ನು ಗ್ರಾಹಕರಿಗೆ ನೀಡದೇ, ಬಿಲ್ಲನ್ನು ವಸೂಲಿ ಮಾಡದೇ ನಗರ ಪಾಲಿಕೆ ಬೊಕ್ಕಸಕ್ಕೆ ಆರ್ಥಿಕವಾಗಿ ನಷ್ಟ ಉಂಟು ಮಾಡಿರುವವರ ಬಗ್ಗೆ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಕೊರತೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೬೬ (೩೨೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ೨೦೦೦ ಜನರಿಗೆ ಓರ್ವ ಪೊಲೀಸ್ ಸಿಬ್ಬಂದಿಯಂತೆ ಅನುಪಾತದಲ್ಲಿರುವುದು ನಿಜವೇ; ಆದರೆ ಬೇರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರತಿ ೭೫೦ ಜನರಿಗೆ ಓರ್ವ ಪೊಲೀಸ್ ಸಿಬ್ಬಂದಿ ಇದ್ದು, ಈ ತಾರತಮ್ಯ ಏಕೆ ; ಜಿಲ್ಲಾವಾರು ಪೊಲೀಸ್ ಸಿಬ್ಬಂದಿ ಸಂಖ್ಯೆ ಎಷ್ಟು ; (ಜಿಲ್ಲಾವಾರು ಜನಸಂಖ್ಯೆಯ ಅನುಪಾತದಲ್ಲಿ ಸಂಪೂರ್ಣ ವಿವರ ನೀಡುವುದು)

(ಆ) ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೋಮು ಗಲಭೆಗಳ ಮೂಲಕ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಜಿಲ್ಲೆಯ ಯಾವ ಠಾಣೆಗಳಲ್ಲಿ ದಾಖಲಾಗಿವೆ ; ಎಷ್ಟು ಪ್ರಕರಣಗಳಲ್ಲಿ ಅಂತಿಮ ವರದಿ ಸಲ್ಲಿಸಲಾಗಿದೆ ; ಎಷ್ಟು



ಪ್ರಕರಣಗಳಿಗೆ ಬಿ–ರಿಪೋರ್ಟ್ ಸಲ್ಲಿಸಲಾಗಿದೆ ; (ವಿವರ ನೀಡುವುದು)

(ಇ) ಕೋಮು ಗಲಭೆಗಳ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಪ್ರತ್ಯೇಕ ನ್ಯಾಯಾಲಯ ರಚಿಸಲಾಗಿದೆಯೇ ;

(ಈ) ಪ್ರಚೋದನಕಾರಿ ಭಾಷಣ ಮಾಡುವವರ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿವೆ ; ದಾಖಲಾಗಿದ್ದಲ್ಲಿ ಈ ಪ್ರಕರಣಗಳಲ್ಲಿ ಅಂತಿಮ ಚಾರ್ಜ್‌ಶೀಟ್ ಅಥವಾ ಬಿ–ರಿಪೋರ್ಟ್ ಸಲ್ಲಿಸಲಾಗಿದೆಯೇ ; (ವಿವರ ನೀಡುವುದು)

(ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಪೊಲೀಸ್ ಸಿಬ್ಬಂದಿಗಳ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಮಂಗಳೂರಿನಲ್ಲಿರುವ ಪೊಲೀಸ್ ವಸತಿ ಗೃಹಗಳ ಶಿಥಿಲಾವಸ್ಥೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೬೭ (೩೨೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರಿನಲ್ಲಿರುವ ಪೊಲೀಸ್ ವಸತಿ ಗೃಹಗಳು ತುಂಬಾ ಶಿಥಿಲಾವಸ್ಥೆಯಲ್ಲಿದ್ದು, ವಾಸಕ್ಕೆ ಯೋಗ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ವಸತಿ ಗೃಹಗಳನ್ನು ದುರಸ್ತಿಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; ಯಾವಾಗ ದುರಸ್ತಿಗೊಳಿಸಲಾಗುವುದು ; (ವಿವರ ನೀಡುವುದು)

(ಆ) ಪೊಲೀಸ್ ಸಿಬ್ಬಂದಿಗಳು ಮತ್ತು ನಿವೃತ್ತ ಪೊಲೀಸ್ ಸಿಬ್ಬಂದಿಗಳಿಗೆ ಮಂಗಳೂರಿನಲ್ಲಿ ಪ್ರತ್ಯೇಕ ಆಸ್ಪತ್ರೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ; (ವಿವರ ನೀಡುವುದು)

(ಇ) ನಿವೃತ್ತ ಪೊಲೀಸ್ ಸಿಬ್ಬಂದಿಗಳಿಗಾಗಿ ಮಿಲಿಟರಿ ಸಿಬ್ಬಂದಿಗಳ ಮಾದರಿಯಲ್ಲಿ ಕ್ಯಾಂಟೀನ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ರಾಜ್ಯದಲ್ಲಿರುವ ವಾಣಿಜ್ಯ ಸಂಸ್ಥೆಗಳಲ್ಲಿ ಹಾಕುವ ಫಲಕಗಳು ಕನ್ನಡದಲ್ಲಿರುವ ಬಗ್ಗೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೬೮ (೩೬೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ವಾಣಿಜ್ಯ ಸಂಸ್ಥೆಗಳಲ್ಲಿ ಹಾಕುವ ಫಲಕಗಳು ಕನ್ನಡದಲ್ಲಿಯೇ ಇರಬೇಕೆಂದು ಕಡ್ಡಾಯಗೊಳಿಸಿ ಆದೇಶ ಹೊರಡಿಸಲಾಗಿದೆಯೇ ;

(ಆ) ಈ ಆದೇಶ ಅನುಷ್ಠಾನಗೊಳಿಸಲು ಇರುವ ಸಮಸ್ಯೆಗಳೇನು ;

(ಇ) ರಾಜ್ಯದಲ್ಲಿರುವ ವಾಣಿಜ್ಯ ಸಂಸ್ಥೆಗಳು ತಮ್ಮ ಸಂಸ್ಥೆಯ ಫಲಕಗಳನ್ನು ಹಾಕುವಾಗ ಆ ಸಂಸ್ಥೆಗಳ ಹೆಸರುಗಳು ಪ್ರಮುಖವಾಗಿ ಕನ್ನಡದಲ್ಲಿ ಇರುವಂತೆ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?



## ನಗರಾಡಳಿತ ಪ್ರದೇಶಗಳಲ್ಲಿ ಘನ ಹಾಗೂ ದ್ರವ ತ್ಯಾಜ್ಯ.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೬೯ (೩೩೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರಾಡಳಿತ ಪ್ರದೇಶಗಳಲ್ಲಿ ಘನ ಹಾಗೂ ದ್ರವ ತ್ಯಾಜ್ಯ ವಿಲೇವಾರಿಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇದಕ್ಕೆ ಅನುಸರಿಸಬೇಕಾದ ಮಾನದಂಡವೇನು ;

(ಆ) ಈ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆಯೇ ;

(ಇ) ಯಾವ ಯಾವ ನಗರಾಡಳಿತ ಸಂಸ್ಥೆಗಳು, ಘನ ಹಾಗೂ ದ್ರವ ತ್ಯಾಜ್ಯಗಳಿಂದ ಪರ್ಯಾಯ ಇಂಧನ ಹಾಗೂ ಸಾವಯವ ಗೊಬ್ಬರವಾಗಿ ಪರಿವರ್ತಿಸಿ, ಸಂಸ್ಥೆಗೆ ಆದಾಯ ತರುವಂತಾಗಲು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿವೆ ; (ವಿವರ ನೀಡುವುದು)

(ಈ) ನಮ್ಮ ನಗರಗಳನ್ನು ತ್ಯಾಜ್ಯ ಮುಕ್ತವಾದ ನಗರಗಳನ್ನಾಗಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ರಾಜ್ಯದ ಪಶುಪಾಲನೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು ಹಾಗೂ ಔಷಧಿ ಖರೀದಿ.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೦ (೩೩೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪಶುಪಾಲನಾ ಇಲಾಖೆಯಲ್ಲಿ ವೃಂದವಾರು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಪಶುಸಂಗೋಪನಾ ಇಲಾಖೆಯಲ್ಲಿ ಔಷಧಿ ಖರೀದಿ ಪ್ರಕ್ರಿಯೆಗೆ ಇರುವ ಮಾನದಂಡಗಳೇನು ; ಸರಬರಾಜು ಪ್ರಕ್ರಿಯೆ ಹೇಗೆ ನಡೆಯುತ್ತಿದೆ ;

(ಇ) ಈ ರೀತಿ ಸರಬರಾಜು ಮಾಡಿದ ಔಷಧಿ ಗುಣಮಟ್ಟ ಖಾತ್ರಿಪಡಿಸಲು ಸರ್ಕಾರ ಹಾಕಿಕೊಂಡ ಮಾನದಂಡಗಳೇನು ?

## ರಾಜ್ಯದಲ್ಲಿರುವ ಅಧಿಕೃತ ಕಸಾಯಿಖಾನೆಗಳು.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೧ (೩೩೬) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅಧಿಕೃತ ಕಸಾಯಿಖಾನೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಅಧಿಕೃತ ಕಸಾಯಿಖಾನೆಗಳನ್ನು ಸ್ಥಾಪಿಸಲು ಇರುವ ಮಾನದಂಡಗಳೇನು ;

(ಇ) ಅಧಿಕೃತ ಕಸಾಯಿಖಾನೆಗಳಲ್ಲಿ ಈ ಮಾನದಂಡಗಳನ್ನು ಪೂರ್ತಿ ಅನುಸರಿಸಲಾಗುತ್ತಿದೆಯೇ ; ಇಲ್ಲವಾದರೆ ಕಾರಣಗಳನ್ನು ನೀಡುವುದು ;

(ಈ) ರಾಜ್ಯದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಅನಧಿಕೃತ ಕಸಾಯಿಖಾನೆಗಳು ಕಾರ್ಯವೆಸಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ; (ವಿವರ ನೀಡುವುದು)

(ಉ) ಅನಧಿಕೃತ ಕಸಾಯಿಖಾನೆಗಳನ್ನು ನಿಯಂತ್ರಿಸುವಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ?



## ಪೆಟ್ರೋಲಿಯಂ ಉತ್ಪನ್ನಗಳ ಮಾರಾಟ ತೆರಿಗೆ.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೭೨ (೩೩೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೧೨ ರಿಂದ ೨೦೧೪ ರವರೆಗೆ ವಿವಿಧ ರೂಪದಲ್ಲಿರುವ ಪೆಟ್ರೋಲಿಯಂ ಉತ್ಪನ್ನಗಳ ಒಟ್ಟು ಮಾರಾಟವೆಷ್ಟು ;

(ಆ) ಈ ಉತ್ಪನ್ನಗಳ ಮಾರಾಟದಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬಂದಿರುವ ತೆರಿಗೆ ಮೊತ್ತ ಎಷ್ಟು ;

(ಇ) ಕರ್ನಾಟಕ ರಾಜ್ಯದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮಾರಾಟ ತೆರಿಗೆ ಎಷ್ಟಿದೆ ; ಪಕ್ಕದ ರಾಜ್ಯಗಳಾದ ಗೋವಾ, ತಮಿಳುನಾಡು, ಕೇರಳ, ಮಹಾರಾಷ್ಟ್ರಗಳಲ್ಲಿ ಮಾರಾಟ ತೆರಿಗೆಗಳು ಎಷ್ಟಿವೆ ;

(ಈ) ಪೆಟ್ರೋಲ್ ಉತ್ಪನ್ನಗಳ ಮಾರಾಟ ತೆರಿಗೆಯನ್ನು ಕಡಿಮೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಲಾಗುವುದು ?

## ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಂಬಂಧಿಸಿದ ಮಾಹಿತಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೨೭೩ (೩೩೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಕ್ಟೋಬರ್–೯, ೨೦೧೩ರ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟವಾಗಿರುವ ಬಿ.ಎಂ.ಆರ್.ಡಿ.ಎ ವ್ಯಾಪ್ತಿಯ (ಕ್ರ.ಸಂ:

ಬಿ.ಎಂ.ಆರ್.ಡಿ.ಎ: ಎಡಿಟಿಪಿ–೨: ಮಹಾಯೋಜನೆ ಹೋಯೋಪ್ರಾ: ೦೪:೨೦೧೨–೧೩, ದಿ: ೦೩–೧೦–೨೦೧೩) ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಂಬಂಧಿಸಿದಂತೆ, ರಸ್ತೆ ನಿರ್ಮಾಣದ ಮುಖ್ಯ ಯೋಜನೆಯ ಸಂಪೂರ್ಣ ನಕ್ಷೆಯನ್ನು ಒದಗಿಸುವುದು ;

(ಆ) ಸದರಿ ಯೋಜನೆಗೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಸಂಬಂಧ ಕಂದಾಯ ಇಲಾಖೆಗೆ ನಿರ್ದೇಶನ ನೀಡಲಾಗಿದೆಯೇ ; (ವಿವರ ನೀಡುವುದು)

(ಇ) ದೇವನಹಳ್ಳಿ ತಾಲ್ಲೂಕು ಹಾಗೂ ಹೊಸಕೋಟೆ ತಾಲ್ಲೂಕಿನ ಗ್ರಾಮಗಳನ್ನು ಹಸಿರು ವಲಯದಿಂದ (ಗ್ರೀನ್ ಜೋನ್) ವಸತಿ ವಲಯಕ್ಕೆ (ಯಲ್ಲೋ ಜೋನ್) ಪರಿವರ್ತಿಸುವ ಪ್ರಸ್ತಾವನೆ ಮುಂದಿದೆಯೇ ; (ವಿವರ ನೀಡುವುದು)

(ಈ) ಹಾಗಿದ್ದಲ್ಲಿ, ಸದರಿ ತಾಲ್ಲೂಕುಗಳ ಯಾವ ಯಾವ ಗ್ರಾಮಗಳನ್ನು ಪರಿವರ್ತಿಸಲು ಉದ್ದೇಶಿಸಲಾಗಿದೆ ;

(ಉ) ಯಾವ ಕಾಲಮಿತಿಯಲ್ಲಿ ಪರಿವರ್ತಿಸಲಾಗುವುದು ?

## ಮಂಜೂರಾದ ಕಾಮಗಾರಿಗಳು ಪೂರ್ಣಗೊಳ್ಳದೇ ಇರುವ ಬಗ್ಗೆ.

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೪ (೩೪೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಜಿಲ್ಲೆ ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆ ಮತ್ತು ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು ; ಮಂಜೂರಾದ ಅನುದಾನವೆಷ್ಟು ;



(ಆ) ಕಳೆದ ಮೂರು ವರ್ಷಗಳಿಂದ ತೆಗೆದುಕೊಂಡ ಕಾಮಗಾರಿಗಳು ಯಾವ ಹಂತದಲ್ಲಿದೆ ; ಈ ಕಾಮಗಾರಿಗಳು ಇನ್ನು ಪೂರ್ಣಗೊಳ್ಳದೆ ಇರುವುದಕ್ಕೆ ಕಾರಣಗಳೇನು ; ಯಾವಾಗ ಪೂರ್ಣಗೊಳ್ಳುತ್ತದೆ ?

## ಅನಧಿಕೃತವಾಗಿ ಜಮೀನನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ.

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೭೫ (೩೪೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾ ಪುರಸಭೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಜಮೀನಿನ ಖಾಲಿ ಜಾಗಗಳ ವ್ಯಾಪ್ತಿ ಎಷ್ಟು ;

(ಆ) ಸದರಿ ಪುರಸಭೆಗಳ ವ್ಯಾಪ್ತಿಯಲ್ಲಿರುವ ಖಾಲಿ ಜಾಗಗಳನ್ನು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಹೀಗೆ ಅತಿಕ್ರಮಣ ಮಾಡಿದವರಲ್ಲಿ ಸರ್ಕಾರವು ಇಲ್ಲಿಯವರೆಗೆ ಎಷ್ಟು ಜನರ ಮೇಲೆ ಮೊಕದ್ದಮೆ ದಾಖಲಿಸಿದೆ ; ಅತಿಕ್ರಮಣ ಮಾಡಿಕೊಂಡ ಜಮೀನಿನ ಖಾಲಿ ಜಾಗಗಳನ್ನು ತೆರವುಗೊಳಿಸಿ ಪುರಸಭೆ ವಶಕ್ಕೆ ನೀಡಲು ಸರ್ಕಾರವು ಯಾವ ಕ್ರಮಕೈಗೊಂಡಿದೆ ?

## ಪಶುವೈದ್ಯಕೀಯ ಸ್ಪೆಷಾಲಿಟಿ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ.

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೬ (೩೪೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಭಿವೃದ್ಧಿ ವಂಚಿತ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಪಶುಚಿಕಿತ್ಸಾ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಜಿಲ್ಲೆಗಳಲ್ಲಿ ಹೆಚ್ಚಿನ ಪಶು ಚಿಕಿತ್ಸಾ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಈ ಭಾಗದ ಎಷ್ಟು ತಾಲ್ಲೂಕುಗಳಿಗೆ ಸಂಚಾರಿ ಪಶುಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗಿದೆ ;

(ಈ) ಡಾ: ನಂಜುಂಡಪ್ಪರವರ ವರದಿ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಪ್ರತಿ ಜಿಲ್ಲೆಗೂ ಪಶುವೈದ್ಯಕೀಯ ಸ್ಪೆಷಾಲಿಟಿ ಆಸ್ಪತ್ರೆಯನ್ನು ತೆರೆಯಲಾಗುವುದೆ ; ಹಾಗಿದ್ದಲ್ಲಿ, ಯಾವಾಗ ?

## ರಾಜರಾಜೇಶ್ವರಿ ನಗರದ ೫ನೇ ಹಂತಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಬಗ್ಗೆ.

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೭ (೩೪೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ರಾಜರಾಜೇಶ್ವರಿ ನಗರ ೫ನೇ ಹಂತದ ಸಿಂಗಾಪೂರ ಲೇಔಟ್‌ನಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು



ವ್ಯವಸ್ಥೆ ಇಲ್ಲದೆಯೇ ಅಲ್ಲಿನ ನಿವಾಸಿಗಳು ತೀವ್ರ ತೊಂದರೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಯಾವಾಗ ಒಳಚರಂಡಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು ;

(ಇ) ಈ ಭಾಗದ ಜನರಿಗೆ ಸಮರ್ಪಕವಾಗಿ ಕಾವೇರಿ ನೀರು ಸರಬರಾಜು ಮಾಡಲಾಗುವುದೇ ;

(ಈ) ಬತ್ತಿಹೋಗಿರುವ ಕೊಳವೆ ಬಾವಿಗಳ ಬದಲಾಗಿ ಮಹಾನಗರ ಪಾಲಿಕೆಯು ಹೊಸ ಕೊಳವೆ ಬಾವಿಗಳಿಂದ ನೀರು ಪೂರೈಸಲು ಜರೂರು ಕ್ರಮಗಳನ್ನು ಕೈಗೊಳ್ಳಲಾಗುವುದೇ ; ಹಾಗಿದ್ದಲ್ಲಿ ಯಾವಾಗ ?

## ಉತ್ತರ ಕರ್ನಾಟಕ ರೇಷ್ಮೆ ಬೆಳೆಗಾರರಿಗೆ ವಿಶೇಷ ಸವಲತ್ತುಗಳು.

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೭೮ (೩೭೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಭಿವೃದ್ಧಿ ವಂಚಿತ ಉತ್ತರ ಕರ್ನಾಟಕದಲ್ಲಿ ರೇಷ್ಮೆ ಬೆಳೆಯುವವರಿಗೆ ನೀಡುವ ಸೌಲಭ್ಯಗಳೇನು ;

(ಆ) ಹಿಂದುಳಿದ ಈ ಪ್ರದೇಶದ ರೇಷ್ಮೆ ಬೆಲೆಗಾರರಿಗೆ ಹೆಚ್ಚಿನ ವಿಶೇಷ ಸವಲತ್ತುಗಳನ್ನು ನೀಡಲಾಗುವುದೇ ;

(ಇ) ರೇಷ್ಮೆ ನೇಕಾರರಿಗೆ ವಿಶೇಷ ಸಾಲ ಸೌಲಭ್ಯಗಳನ್ನು ಒದಗಿಸಲಾಗುವುದೇ ?

## ಮೆಟ್ರೋ ನೌಕರರಿಗೆ ವೇತನ, ವಸತಿ ಗೃಹ, ಪದೋನ್ನತಿ ಕುರಿತು.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೭೯ (೩೪೫) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮೆಟ್ರೋ ರೈಲು ನಿಗಮ (BMRCL) ಸಂಸ್ಥೆಯು ಸರ್ಕಾರದ ನಿಗಮವೇ ಅಥವಾ ಖಾಸಗಿ ನಿಗಮವೇ ; (ಈ ಬಗ್ಗೆ ವಿವರವಾದ ಮಾಹಿತಿ ನೀಡುವುದು) ;

(ಆ) ಸರ್ಕಾರದ ನಿಗಮ ಆಗಿದ್ದರೆ ನಿಗಮದ ನೌಕರರ ವೃಂದ ಮತ್ತು ನೇಮಕಾತಿ ನಿಯಮಗಳು–೨೦೧೪ ಮತ್ತು ವಸತಿ ಗೃಹ ಹಂಚಿಕೆ ನಿಯಮಗಳು ಹಾಗೂ ನೌಕರರಿಗೆ ಇತರ ಭತ್ಯೆ ನೀಡುವ ನಿಯಮಗಳನ್ನು ವ್ಯವಸ್ಥಾಪಕ ನಿರ್ದೇಶಕರು ಸರ್ವಾಧಿಕಾರಿಗಳಂತೆ ಮನಸ್ಸಿಗೆ ಬಂದಂತೆ ನಿಯಮ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು ; (ಸಂಪೂರ್ಣ ವಿವರದೊಂದಿಗೆ ಮಾಹಿತಿ ಕೊಡುವುದು)

(ಇ) ಬಿ.ಎಂ.ಆರ್.ಸಿ.ಎಲ್ (BMRCL) ನಿಗಮದಲ್ಲಿ ಸಂಸ್ಥೆಯ ನೌಕರರಿಗೆ ಪದೋನ್ನತಿ (Promotion) ನೀಡುವಾಗ ಜೇಷ್ಠತೆಯನ್ನು ಕಡೆಗಣಿಸಿ ಮತ್ತೊಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಅಂಕಗಳ ಆಧಾರದ ಮೇಲೆ ಪದೋನ್ನತಿ ನೀಡುವ ಬಗ್ಗೆ ಸಿ & ಆರ್. ನಲ್ಲಿ ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ;



(ಈ) ಸರ್ಕಾರದ ಇಲಾಖೆ, ಸರ್ಕಾರದ ನಿಗಮಗಳು, ಸಂಸ್ಥೆಗಳಲ್ಲಿ ನೌಕರರಿಗೆ, ಪದೋನ್ನತಿ ನೀಡುವಾಗ ಜೇಷ್ಠತೆಯ ನಿಯಮ ಅನುಸರಿಸಲಾಗುವುದೇ ಅಥವಾ ಬೇರೆ ಯಾವ ರೀತಿ ನಿಯಮಗಳನ್ನು ಅಳವಡಿಸಲಾಗಿದೆ ಎಂದು ಸ್ಪಷ್ಟೀಕರಣ ನೀಡುವುದು ; ಒಬ್ಬೊಬ್ಬರಿಗೆ ಒಂದೊಂದು ರೀತಿಯ ಕಾನೂನು ನಿಯಮಗಳಲ್ಲಿ ವ್ಯತ್ಯಾಸ ಇದೆಯೇ ಸ್ಪಷ್ಟೀಕರಿಸಿ ?

## ೧೯೮೩ರ ಪಂಚಾಯತ್ ಅಧಿನಿಯಮ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೮೦ (೩೪೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) "ದಿ ಕರ್ನಾಟಕ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಮಂಡಲ್ ಪಂಚಾಯತ್, ನ್ಯಾಯ ಪಂಚಾಯತ್ ಆಕ್ಟ್ ೧೯೮೩" ಯಾವ ದಿನಾಂಕದಂದು ಜಾರಿಗೆ ಬಂದಿರುತ್ತದೆ ;

(ಆ) ಸದರಿ ಅಧಿನಿಯುಮುವನ್ನು ಯಾವ ದಿನಾಂಕದಂದು ನಿರಶನಗೊಳಿಸಲಾಯಿತು ;

(ಇ) ಸದರಿ ಅಧಿನಿಯಮದಡಿಯಲ್ಲಿ ರಚಿತಗೊಂಡ ಮಧ್ಯಂತರ ಮಂಡಲ್ ಪಂಚಾಯಿತಿಗಳು ಅಧಿನಿಯಮ ನಿರಶನಗೊಂಡ ನಂತರ ಏನಾದವು ; (ವಿವರವಾದ ಮಾಹಿತಿ ನೀಡಿ)

(ಈ) ಕರ್ನಾಟಕ ರಾಜ್ಯ, ಗ್ರಾಮ ಪಂಚಾಯತ್, ಅಧಿನಿಯಮ ಯಾವ ದಿನಾಂಕದಿಂದ ಜಾರಿಗೆ ಬಂದಿದೆ ;

(ಉ) ಕಾನೂನು ಇಲಾಖೆ ಅಡಿಯಲ್ಲಿ ಬರುವ ನಿಗಮ, ಮಂಡಳಿ ಪ್ರಾಧಿಕಾರ, ಆಯೋಗ, ಅಕಾಡೆಮಿ, ಅಂಗ ಸಂಸ್ಥೆಗಳು ಯಾವುವು ?

ವಿವರವಾಗಿ ಕೇಂದ್ರ ಕಛೇರಿ, ವಿಳಾಸ, ಒಳಗೊಂಡಂತೆ ವಿವರವಾದ ಮಾಹಿತಿ ನೀಡಿ)

## ಅನುಕಂಪ ಆಧಾರಿತ ನೇಮಕಾತಿ ಕುರಿತು.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೮೧ (೩೪೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ ಅನುಕಂಪ ಆಧಾರಿತ ನೇಮಕಾತಿ ನೀಡುವ ವ್ಯವಸ್ಥೆ ಯಾವಾಗಿನಿಂದ ಜಾರಿಗೆ ಬಂದಿದೆ ;

(ಆ) ಇಲ್ಲಿಯವರೆಗೆ ಎಷ್ಟು ಜನರಿಗೆ ಅನುಕಂಪ ಆಧಾರಿತ ನೇಮಕಾತಿ ಆದೇಶ ನೀಡಲಾಗಿದೆ ; (ಹೆಸರು ಹಾಗೂ ಹುದ್ದೆಗಳ ವಿವರ ಕೊಡುವುದು)

(ಇ) ಈಗ ನಿಗಮದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಆದೇಶ ನೀಡುವ ಎಷ್ಟು ಪ್ರಕರಣಗಳು ಬಾಕಿ ಇವೆ ; (ವಿವರ ಕೊಡುವುದು)

(ಈ) ಬಾಕಿ ಇರುವ ಈ ಅರ್ಜಿದಾರರಿಗೆ ಯಾವ ದಿನಾಂಕದೊಳಗೆ ನೇಮಕಾತಿಗೆ ಆದೇಶ ನೀಡಲಾಗುವುದು ?

## ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೮೨ (೩೮೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ ಅಭಿವೃದ್ಧಿಯು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಬಂದಿದ್ದರೆ, ಈ ಸಂಬಂಧ ಸರ್ಕಾರವು ರೇಷ್ಮೆ ಉತ್ಪಾದನೆ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು ; (ಸಂಪೂರ್ಣವಾದ ಮಾಹಿತಿ ಕೊಡುವುದು)

(ಇ) ರೇಷ್ಮೆ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳಾವುವು ; (ವಿವರವಾದ ಮಾಹಿತಿ ನೀಡುವುದು)

(ಈ) ರೇಷ್ಮೆ ಇಲಾಖೆಯಡಿಯಲ್ಲಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಆಯೋಗ, ಅಕಾಡೆಮಿ, ಅಂಗ ಸಂಸ್ಥೆಗಳು ಯಾವುವು ; ಯಾವ ಉದ್ದೇಶಕ್ಕಾಗಿ ಯಾವಾಗ ಸ್ಥಾಪನೆ ಮಾಡಲಾಯಿತು ? (ಕೇಂದ್ರ ಕಛೇರಿ, ವಿಳಾಸ, ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು)

## ಪಿ.ಎಸ್.ಐ ಹುದ್ದೆಗೆ ನೇಮಕಾತಿ ಸಂಬಂಧ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೮೩ (೩೮೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೦೨ನೇ ಸಾಲಿನಿಂದ ಇಲ್ಲಿಯುವರೆಗೆ ಎಷು ಜನ ಅಭ್ಯರ್ಥಿಗಳನ್ನು ಪಿ.ಎಸ್.ಐ Police Sub Inspector ಹುದ್ದೆಯಡಿ ನೇಮಕಾತಿ ಮಾಡಿಕೊಳ್ಳಲಾಗಿದೆ ; (ವರ್ಷಾವಾರು ಮಾಹಿತಿ ನೀಡುವುದು) ;

(ಆ) ೨೦೦೨ನೇ ಸಾಲಿನಿಂದ ಇಲ್ಲಿಯವರೆಗೆ ಪಿ.ಎಸ್.ಐ Police Sub Inspector ಹುದ್ದೆಯಡಿ ನೇಮಕಗೊಂಡ ಎಷ್ಟು ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿ ಸಂಬಂಧ ನ್ಯಾಯಾಲಯ (ಕರ್ನಾಟಕ

ಆಡಳಿತ ನ್ಯಾಯ ಮಂಡಳಿ ಮತ್ತು ಕರ್ನಾಟಕ ಉಚ್ಚನ್ಯಾಯಾಲಯ)ದಲ್ಲಿ ದಾವೆ ಹೂಡಿದ್ದಾರೆ ; (ವರ್ಷವಾರು ಮಾಹಿತಿ ನೀಡುವುದು)

(ಇ) ಗ್ರಾಮೀಣ ಮೀಸಲಾತಿ ಸಂಬಂಧ ೨೦೦೨ನೇ ಸಾಲಿನಿಂದ ಇಲ್ಲಿಯವರೆಗೆ ದಾವೆ ಹೂಡಿರುವ ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥಗೊಂಡಿವೆ ? (ವಿವರವಾದ ಮಾಹಿತಿ ಕೊಡುವುದು)

## ಪಶುಚಿಕಿತ್ಸಾಲಯವನ್ನು ಪ್ರಾರಂಭಿಸುವ ಕುರಿತು.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೮೪ (೩೪೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ, ಹಿರೇಬೂದನೂರು ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಇಲ್ಲದೇ ಇರುವುದರಿಂದ, ಸದರಿ ಗ್ರಾಮದ ಹಾಗೂ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಪಶುಗಳಿಗೆ ಚಿಕಿತ್ಸೆ ದೊರಕದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಗ್ರಾಮ ಪಂಚಾಯಿತಿಯವರು ಹಾಗೂ ಸ್ಥಳೀಯ ಗ್ರಾಮದಲ್ಲಿ ಪಶು ಚಿಕಿತ್ಸಾಲಯಕ್ಕೆ ಅಗತ್ಯವಿರುವ ಭೂಮಿಯನ್ನು ನೀಡಲು ಒಪ್ಪಿಗೆ ಸೂಚಿಸಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ನಿಜವೇ ;



(ಇ) ಹಾಗಾದಲ್ಲಿ ಸದರಿ ಪ್ರಸ್ತಾವನೆಯು ಇನ್ನೂ ಯಾವ ಹಂತದಲ್ಲಿರುತ್ತದೆ ; ಸದರಿ ಗ್ರಾಮ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಪಶುಗಳಿಗೆ ಸೂಕ್ತ ಚಿಕಿತ್ಸೆಯನ್ನು ಕೊಡಿಸಲು ಪಶು ಚಿಕಿತ್ಸಾಲಯವು ಅತ್ಯವಶ್ಯವಿದ್ದು, ಸರ್ಕಾರವು ಪಶು ಚಿಕಿತ್ಸಾಲಯವನ್ನು ನಿರ್ಮಾಣ ಮಾಡಲು ಕೂಡಲೇ ಕ್ರಮ ಕೈಗೊಳ್ಳುವುದೇ, ಇದನ್ನು ನಿರ್ಮಾಣ ಮಾಡಲು ಎಷ್ಟು ಕಾಲಾವಕಾಶ ಬೇಕಾಗುವುದು ? (ಮಾಹಿತಿ ನೀಡುವುದು)

## ಬೆಳಗಾವಿ ನಗರವನ್ನು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಸೇರಿಸಲು ಕ್ರಮ ಕೈಗೊಳ್ಳುವ ಬಗ್ಗೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೮೫ (೩೫೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ನಗರವನ್ನು ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಆ) ಸ್ಮಾರ್ಟ್ ಸಿಟಿಯನ್ನಾಗಿ ಹೊಂದಲು ಬೆಳಗಾವಿ ನಗರವು ಎಲ್ಲ ಅರ್ಹತೆಗಳನ್ನು ಹೊಂದಿರುವ ಸಂಗತಿಯನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗುವುದೇ ;

(ಇ) ರಾಜ್ಯದ ಯಾವ ಯಾವ ನಗರಗಳನ್ನು ಸ್ಮಾರ್ಟ್ ಸಿಟಿಯನ್ನಾಗಿ ಮಾಡಬೇಕು ಎಂದು ರಾಜ್ಯ ಸರ್ಕಾರವು ಸೂಚಿಸಿದೆ ?

## ಕರ್ನಾಟಕ ರಾಜ್ಯದಲ್ಲಿ ಏಷಿಯನ್ ಪೈಂಟ್ ಯುನಿಟ್ ರಾಜ್ಯದಿಂದ ಕೈ ತಪ್ಪಿ ಹೋಗುತ್ತಿರುವ ಬಗ್ಗೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೮೬ (೩೫೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಏಷಿಯನ್ ಪೈಂಟ್ ಕಂಪನಿಯವರು ಒಂದು ಘಟಕ ಪ್ರಾರಂಭಿಸಲು ಬಯಸಿರುವ ಸಂಗತಿ ನಿಜವೇ ;

(ಆ) ಈ ಕಂಪನಿಯವರು ಯಾವ–ಯಾವ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿರುತ್ತಾರೆ ; ಹಾಗೂ ಸರ್ಕಾರದವರು ಯಾವ–ಯಾವ ಬೇಡಿಕೆಗಳನ್ನು ಪೂರೈಸಿದೆ ; ಹಾಗೂ ಆ ಯುನಿಟ್ ಯಾವ ಸ್ಥಳದಲ್ಲಿ ಬರುವುದು ;

(ಇ) ಏಷಿಯನ್ ಪೈಂಟ್ ಕಂಪನಿಯವರ ಎಲ್ಲಾ ಬೇಡಿಕೆಗಳನ್ನು ಸರ್ಕಾರದವರು ನಿಗಧಿತ ಅವಧಿಯೊಳಗೆ ಪೂರೈಸದೇ ಇರುವ ಹಿನ್ನೆಲೆಯಲ್ಲಿ ಈ ಕಂಪನಿಯು ರಾಜ್ಯದಿಂದ ಬೇರೆ ಕಡೆಗೆ ಹೋಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಈ ಕಂಪನಿಯನ್ನು ರಾಜ್ಯದಲ್ಲಿಯೇ ಉಳಿಸಿಕೊಳ್ಳಲು ಸರ್ಕಾರದವರು ಯಾವ–ಯಾವ ಕ್ರಮಗಳನ್ನು ಕೈಗೊಂಡಿರುವರು ;

(ಉ) ಏಷಿಯನ್ ಪೈಂಟ್ ಯುನಿಟ್ ಪ್ರಾರಂಭಿಸಲು ಈಗಾಗಲೇ ಆಂಧ್ರ ಸರ್ಕಾರದವರು ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?



## ಕಿತ್ತೂರಿನಲ್ಲಿ ಪೂರ್ಣ ಪ್ರಮಾಣದ ನ್ಯಾಯಾಲಯ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೮೭ (೩೪೯) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಿತ್ತೂರಲ್ಲಿ ಇನ್ನೂವರೆಗೂ ಪೂರ್ಣ ಪ್ರಮಾಣದ ಕಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ, ಹಾಗೂ ಪ್ರಥಮ ದರ್ಜೆ ದಂಡಾಧಿಕಾರ ನ್ಯಾಯಾಲಯ ಆಗದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬೈಲಹೊಂಗಲದಿಂದ ಹೆಚ್ಚುವರಿ ಕಿರಿಯ ಶ್ರೇಣಿ ನ್ಯಾಯಾಧೀಶರು ಇಲ್ಲಿ ವಾರದಲ್ಲಿ ಮೂರುದಿನ ಬಂದು ಕೆಲಸ ನಿರ್ವಹಿಸುತ್ತಿರುವ ಸಂಗತಿ ನಿಜವೇ ;

(ಇ) ವಾರದಲ್ಲಿ ಕೇವಲ ಮೂರು ದಿನ ಕೋರ್ಟ್ ಕಲಾಪ ನಡೆಸುತ್ತಿರುವುದರಿಂದ ಕಕ್ಷಿದಾರರಿಗೆ ವಕೀಲರಿಗೆ ಹಾಗೂ ಕೋರ್ಟ್ ಸಿಬ್ಬಂದಿಗೆ ತುಂಬಾ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಇಲ್ಲಿ ಪೂರ್ಣ ಪ್ರಮಾಣದ ಕೋರ್ಟ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

## ತಿರುಮಲ–ತಿರುಪತಿ ಕರ್ನಾಟಕ ಭವನದ ಮೂಲ ಸೌಕರ್ಯಗಳ ಬಗ್ಗೆ.

**ಶ್ರೀಮತಿ ವಿಮಲಾಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೮೮ (೩೬೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಂಧ್ರಪ್ರದೇಶದ ತಿರುಮಲ–ತಿರುಪತಿಯಲ್ಲಿರುವ ಕರ್ನಾಟಕ ಭವನದಿಂದ ರಾಜ್ಯ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಿಂದ ಬಂದ ಆದಾಯವೆಷ್ಟು ; (ವರ್ಷಾವಾರು ಮಾಹಿತಿ ನೀಡುವುದು)

(ಆ) ಸದರಿ ಭವನದಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು ; ವಿಐಪಿ ಕೊಠಡಿಗಳೆಷ್ಟು ಮತ್ತು ಸಾಮಾನ್ಯ ಕೊಠಡಿಗಳೆಷ್ಟು ; ಸದರಿ ಕೊಠಡಿಗಳಿಗೆ ದಿನವೊಂದಕ್ಕೆ ನಿಗದಿಪಡಿಸಿರುವ ಬಾಡಿಗೆ ಎಷ್ಟು ;

(ಇ) ಇಲ್ಲಿ ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರುಗಳ ಸಂಖ್ಯೆ ಎಷ್ಟು ; (ಹುದ್ದೆವಾರು ಹೆಸರು, ಪದನಾಮ ಮತ್ತು ಎಷ್ಟು ಕಾಲಾವಧಿಯಿಂದ ಸದರಿ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಸಂಪೂರ್ಣ ವಿವರ ನೀಡುವುದು)

(ಈ) ಹಾಲಿ ಇರುವ ಖಾಲಿ ಹುದ್ದೆಗಳೆಷ್ಟು ; ನಿಯೋಜನೆ ಅಥವಾ ಓಓಡಿ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ ಎಷ್ಟು ; (ಹುದ್ದೆವಾರು ಮತ್ತು ಅವರ ಮೂಲ ಕರ್ತವ್ಯ ಸ್ಥಳದ ಬಗ್ಗೆ ವಿವರಣೆ ನೀಡುವುದು)

(ಉ) ದಿನಗೂಲಿ ನೌಕರರುಗಳ ಸಂಖ್ಯೆ ಎಷ್ಟು ; ಅವರಿಗೆ ನೀಡುತ್ತಿರುವ ಪ್ರತಿ ದಿನದ ಬಟವಾಡೆ ಎಷ್ಟು ;



(ಊ) ತಿರುಮಲದ ಕರ್ನಾಟಕ ಭವನದಲ್ಲಿ ಸ್ವಚ್ಚತೆ ಮತ್ತು ಮೂಲಸೌಕರ್ಯಗಳ ಕೊರತೆಯಿಂದಾಗಿ ಪ್ರವಾಸಿಗರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಋ) ಮಧ್ಯವರ್ತಿಗಳ ಹಾವಳಿಯಿಂದ ನಮ್ಮ ರಾಜ್ಯದಿಂದ ತಿರುಮಲಕ್ಕೆ ಹೋಗುವ ಭಕ್ತಾಧಿಗಳಿಗೆ ಕರ್ನಾಟಕ ಭವನದಲ್ಲಿ ಕೊಠಡಿಗಳು ಸಿಗದೆ ಪರದಾಡುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಎ) ಹಾಗಿದ್ದಲ್ಲಿ, ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ ; ಎಷ್ಟು ಕಾಲಾವಧಿಯಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸಲಾಗುವುದು ?

## ಮಂತ್ರಾಲಯದ ಕರ್ನಾಟಕ ಭವನ ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ.

**ಶ್ರೀಮತಿ ವಿಮಲಾಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೮೯ (೩೫೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂತ್ರಾಲಯದಲ್ಲಿರುವ ಕರ್ನಾಟಕ ಭವನವನ್ನು ಖಾಸಗಿಯವರಿಗೆ ನೀಡಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಎಷ್ಟು ವರ್ಷಗಳಿಗೆ ನೀಡಲಾಗಿದೆ ; ವಿಧಿಸಿರುವ ನಿಯಮ, ನಿಬಂಧನೆಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಇಲ್ಲಿ ಕಾರ್ಯನಿರ್ವಹಿಸುವ ನೌಕರರುಗಳಿಗೆ ಸರ್ಕಾರ ವೇತನ ಪಾವತಿಸುವುದೇ, ಅಥವಾ ಹಾಲಿ ನಿರ್ವಹಣೆ ಮಾಡುತ್ತಿರುವುದು ಖಾಸಗಿಯವರೇ ;

(ಈ) ಕೊಠಡಿಗಳ ದುರಸ್ತಿ ಮತ್ತು ಸ್ವಚ್ಛತೆ ಇಲ್ಲದೆ ರಾಜ್ಯದಿಂದ ಹೋಗುವ ಪ್ರವಾಸಿಗರು ತೊಂದರೆ ಅನುಭವಿಸುತ್ತಿರುವುದು ಸರ್ಕಾರ ಗಮನಿಸಿದೆಯೇ ;

(ಉ) ಹಾಗಿದ್ದಲ್ಲಿ, ಇದನ್ನು ನಿಭಾಯಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಫುಟ್‌ಪಾತ್ ಅತಿಕ್ರಮಣ ಬಗ್ಗೆ.

**ಶ್ರೀಮತಿ ವಿಮಲಾಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೯೦ (೩೬೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಪಾದಚಾರಿ ಮಾರ್ಗಗಳು ವ್ಯಾಪಾರಿಗಳ ತಾಣಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇವರುಗಳನ್ನು ನಿಯಂತ್ರಣ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಕಾಮಗಾರಿಗಳ ಮಂದಗತಿ ಕಾರ್ಯದಿಂದ ಫುಟ್‌ಪಾತ್‌ಗಳು ಮುಚ್ಚಿಹೋಗಿ ಸಾರ್ವಜನಿಕರು ರಸ್ತೆಗಳ ಮಧ್ಯೆ ಹೋಗುವ ಪರಿಸ್ಥಿತಿ ಇರುವುದು ಸರ್ಕಾರ ಮನಗಂಡಿದೆಯೇ ;

(ಈ) ಹಾಗಿದ್ದಲ್ಲಿ, ಸರ್ಕಾರ ಈ ಎಲ್ಲಾ ಸಮಸ್ಯೆಗಳನ್ನು ನಿವಾರಣೆ ಮಾಡಲು ಎಷ್ಟು ಕಾಲಾವಕಾಶ ಬೇಕು ? (ವಿವರ ನೀಡುವುದು)



## ಆಸ್ತಿ ನೋಂದಣಿ ಶುಲ್ಕ ಹೆಚ್ಚಳ.

**ಶ್ರೀಮತಿ ವಿಮಲಾಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೯೧ (೩೫೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಆಸ್ತಿ ನೋಂದಣಿ ಶುಲ್ಕವನ್ನು ಹೆಚ್ಚಳ ಮಾಡಿರುವುದು ನಿಜವೇ ;

(ಆ) ಹಾಗಿದ್ದರೆ, ಹೆಚ್ಚಳ ಮಾಡಿರುವ ದರ ಎಷ್ಟು ; ಯಾವ ದಿನಾಂಕದಿಂದ ಈ ದರ ಜಾರಿಗೆ ಬಂದಿರುತ್ತದೆ ;

(ಇ) ಬೆಂಗಳೂರು ನಗರ ಜಿಲ್ಲೆಯ ವಾರ್ಡ್‌ವಾರು ಹಿಂದಿನ ಮತ್ತು ಪ್ರಸ್ತುತ ಪರಿಷ್ಕೃತ ದರದ ಬಗ್ಗೆ ಮಾರ್ಗಸೂಚಿಯನ್ನು ಒದಗಿಸುವುದು ;

(ಈ) ಸಾರ್ವಜನಿಕರ ಹಿತದೃಷ್ಠಿಯಿಂದ ಮಾರುಕಟ್ಟೆಯ ದರಕ್ಕಿಂತಲೂ ಹೆಚ್ಚಾಗಿರುವ ದರವನ್ನು ಕಡಿಮೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಬೆಂಗಳೂರು ನಗರದಲ್ಲಿ ಹೆಚ್ಚಾಗಿರುವ ವೇಶ್ಯಾವಾಟಿಕೆ ಅಡ್ಡೆಗಳು

**ಶ್ರೀಮತಿ ವಿಮಲಾಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೯೨ (೩೫೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ವೇಶ್ಯಾವಾಟಿಕೆ ಅಡ್ಡೆಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದರೆ ಕಳೆದ ಒಂದು ವರ್ಷದಿಂದ ಇಂತಹ ಎಷ್ಟು ಪ್ರಕರಣಗಳನ್ನು ಪೊಲೀಸರು ಬೇಧಿಸಿರುತ್ತಾರೆ; ಎಷ್ಟು ಜನರ ವಿರುದ್ಧ ಕ್ರಮ ಜರುಗಿಸಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ವೇಶ್ಯಾವಾಟಿಕೆಯಿಂದ ರಕ್ಷಿಸಲ್ಪಟ್ಟ ೧೦ ಯುವತಿಯರು ಬೆಂಗಳೂರಿನ ಪುನರ್ವಸತಿ ಕೇಂದ್ರದಿಂದ ಪರಾರಿಯಾಗಿರುವುದು ನಿಜವೇ ;

(ಈ) ವೇಶ್ಯಾವಾಟಿಕೆಯನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತರಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು ? (ವಿವರ ನೀಡುವುದು)

## ಗುಪ್ತದಳದ ಕಾರ್ಯ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೯೩ (೩೬೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಗುಪ್ತದಳದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು (ಪದನಾಮ ವಿವರ ನೀಡುವುದು)

(ಆ) ರಾಜ್ಯದಲ್ಲಿ ಗುಪ್ತದಳ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೇ ;

(ಇ) ಇದ್ದರೆ, ಇತ್ತೀಚೆಗೆ ಕೆಲವು ದುಷ್ಕರ್ಮಿಗಳು ನಡೆಸುತ್ತಿರುವ ಸಮಾಜ ದ್ರೋಹಿ ಕೆಲಸಗಳು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;

(ಈ) ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕಠಿಣ ಕ್ರಮಗಳೇನು ;

(ಉ) ಈ ಗುಪ್ತದಳಕ್ಕೆ ಪ್ರತ್ಯೇಕವಾಗಿ (ಪೊಲೀಸ್ ಇಲಾಖೆಯಿಂದ ಬೇರ್ಪಟ್ಟು) ನೇಮಕಾತಿ ಪ್ರಕ್ರಿಯೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು ;



(ಊ) ಗುಪ್ತದಳದ ಕಾರ್ಯಕ್ಷಮತೆ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸರಗಳ್ಳತನ ಪ್ರಕರಣಗಳ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೯೪ (೩೬೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೧ ವರ್ಷದಿಂದ ನಡೆದ ಸರಗಳ್ಳತನ ಪ್ರಕರಣಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಸರಗಳ್ಳತನ ಇಷ್ಟು ಪ್ರಮಾಣದಲ್ಲಿ ನಡೆಯಲು ಕಾರಣಗಳೇನು ;

(ಇ) ಸರಗಳ್ಳತನ ತಡೆಯಲು ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಗಳೇನು ;

(ಈ) ಎಷ್ಟು ಜನ ಸರಗಳ್ಳರಿಗೆ ಶಿಕ್ಷೆಯಾಗಿದೆ ; (ಪ್ರಕರಣವಾರು ಹಾಗೂ ಶಿಕ್ಷೆಯ ಪ್ರಮಾಣ ತಿಳಿಸುವುದು)

(ಉ) ಈ ಶಿಕ್ಷೆಯ ಪ್ರಮಾಣ ಹೆಚ್ಚಿಸಲು ಸರ್ಕಾರ ಕಾನೂನು ತಿದ್ದುಪಡಿ ಮಾಡಲು ಚಿಂತಿಸಿದೆಯೇ ?

## ಮರಳು ನೀತಿ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೯೫ (೨೫೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಮರಳು ನೀತಿ ಜಾರಿಯಲ್ಲಿದೆಯೇ; ಇದ್ದರೆ ಅದರ ವ್ಯಾಪ್ತಿ ಹಾಗೂ ಉದ್ದೇಶಗಳೇನು ;

(ಆ) ಮರಳು ನೀತಿ ಜಾರಿಯಲ್ಲಿದ್ದರೂ ಅಕ್ರಮ ಮರಳು ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಮರಳು ನೀತಿಯಿಂದ ರೈತರು ಹಾಗೂ ಸರ್ಕಾರದಿಂದ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿರುವ ಫಲಾನುಭವಿಗಳು ಸ್ವಂತ ಮನೆ ಕಟ್ಟಿಕೊಳ್ಳಲು ಮರಳು ಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾಗಿರುವ ಅನುದಾನ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೯೬ (೩೬೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ ಹಾಗೂ ೨೦೧೪–೧೫ ರಲ್ಲಿ ನಗರಾಭಿವೃದ್ಧಿ ಇಲಾಖಾ ವ್ಯಾಪ್ತಿಗೆ ಒಳಪಡುವ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿರುವ ಹಣದ ಮೊತ್ತ ಎಷ್ಟು ; (ಸ್ಥಳೀಯ ಸಂಸ್ಥೆವಾರು ವಿವರ ನೀಡುವುದು)



(ಆ) ೨೦೧೦–೧೧, ೨೦೧೧–೧೨ ಹಾಗೂ ೨೦೧೨–೧೩ನೇ ಸಾಲುಗಳಲ್ಲಿ ಇದೇ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಹಣದ ಪ್ರಮಾಣ ಎಷ್ಟು ;

(ಇ) ೨೦೧೩–೧೪ ರಿಂದ ಈ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಸರ್ಕಾರ ತಂದಿರುವ ಹೊಸ ಯೋಜನೆಗಳಾವುವು ? (ವಿವರ ನೀಡುವುದು)

## ನ್ಯಾಯಾಲಯದಲ್ಲಿರುವ ಪ್ರಕರಣಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೯೭ (೩೬೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನ್ಯಾಯಮೂರ್ತಿಗಳು ಹಾಗೂ ನ್ಯಾಯಾಂಗ ಅಧಿಕಾರಿಗಳ ಸಂಖ್ಯೆ ಎಷ್ಟು ; (ಪದನಾಮ ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ನ್ಯಾಯಾಲಯಗಳ ಸಂಖ್ಯೆ ಎಷ್ಟು ;

(ಇ) ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು ;

(ಈ) ಈ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ವಿಲೇವಾರಿ ಮಾಡದೇ ಇರಲು ಕಾರಣಗಳೇನು ?

## ಮುಜರಾಯಿ ದೇವಸ್ಥಾನಗಳ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೯೮ (೩೭೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆಯಿಂದ ಕಳೆದ ೩ ವರ್ಷಗಳಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವಿವಿಧ ದೇವಾಲಯಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಆ ಪೈಕಿ ಯಾವ ಯಾವ ದೇವಸ್ಥಾನಗಳ ಅಭಿವೃದ್ಧಿ ಜೀರ್ಣೋದ್ಧಾರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ? (ಮಾಹಿತಿ ನೀಡುವುದು)

## ಪೊಲೀಸ್ ಸಿಬ್ಬಂದಿ ವಸತಿ ಗೃಹಗಳ ಕೊರತೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೯೯(೩೬೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿಯಲ್ಲಿ ಪೊಲೀಸ್ ಸಿಬ್ಬಂದಿಗೆ ವಸತಿ ಗೃಹಗಳು ಅವಶ್ಯಕತೆಗೆ ಅನುಗುಣವಾಗಿ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಬಂದಿದ್ದಲ್ಲಿ, ಕೊರತೆಯಿರುವ ವಸತಿ ಗೃಹ ನಿರ್ಮಾಣಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಇ) ಹಾಲಿ ಇರುವ ವಸತಿ ಗೃಹಗಳು ಶಿಥಿಲಾವ್ಯವಸ್ಥೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಹೊಸ ವಸತಿ ಗೃಹಗಳನ್ನು ಮಂಜೂರು ಮಾಡಲಾಗಿದೆಯೇ ?

## ಕಲಬುರಗಿ ಜಿಲ್ಲೆಯಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ) :–**

೩೦೦(೨೮೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರಿ, ಮಧ್ಯಮ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು ; ಅವಲಂಬಿತ ಕಾರ್ಮಿಕರ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಆ) ಕಲಬುರಗಿ ಜಿಲ್ಲೆಯಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಯೋಜನೆಗಳು ಸರ್ಕಾರದ ಮುಂದಿದೆಯೇ, ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ; (ವಿವರ ಒದಗಿಸುವುದು)

(ಇ) ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ ನಿರುದ್ಯೋಗ ಸಮಸ್ಯೆಯನ್ನು ಜಿಲ್ಲೆಯಲ್ಲಿ ಕಡಿತಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಿದೆಯೇ ; ಇದ್ದಲ್ಲಿ, ವಿವರ ನೀಡುವುದು ?

## ಕಲಬುರಗಿ ಜಿಲ್ಲೆಯ ಮಹಿಳಾ ಪೊಲೀಸ್ ಠಾಣೆಗಳು

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ) :–**

೩೦೧ (೩೭೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿರುವ ಮಹಿಳಾ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ; ಒಟ್ಟು ಎಷ್ಟು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ;

(ಆ) ಜಿಲ್ಲೆಯಲ್ಲಿ ಹೊಸ ಮಹಿಳಾ ಪೊಲೀಸ್ ಠಾಣೆಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ವಿವರ ಒದಗಿಸುವುದು ;

(ಇ) ಕಳೆದ ೫ ವರ್ಷಗಳಲ್ಲಿ ಮಹಿಳಾ ಪೊಲೀಸ್ ಠಾಣೆಯಲ್ಲಿ (ಕಲಬುರಗಿ ಜಿಲ್ಲೆಯಲ್ಲಿ ) ಎಷ್ಟು ಪ್ರಕರಣಗಳು ದಾಖಲಾಗಿವೆ, ಇದರಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ ? (ಕಾರಣ ತಿಳಿಸುವುದು)



## ಕಲಬುರಗಿ ಜಿಲ್ಲೆಯ ಅಪರಾದ ಪ್ರಕರಣಗಳು

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) :–**

೩೦೨ (೩೭೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಕಳೆದ ೨ ವರ್ಷಗಳಲ್ಲಿ ದಾಖಲಾಗಿರುವ ಒಟ್ಟು ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು ;

(ಆ) ಇದರಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ ; ಮತ್ತು ಬಾಕಿ ಉಳಿಯಲು ಸೂಕ್ತ ಕಾರಣ ತಿಳಿಸುವುದು ಹಾಗೂ ಇತ್ಯರ್ಥ ಪಡಿಸಲು ಬೇಕಾಗುವ ಸಮಯ ಎಷ್ಟು ; (ವಿವರ ನೀಡುವುದು)

(ಇ) ಕಳೆದ ೨ ವರ್ಷಗಳಲ್ಲಿ ಅಪರಾಧ ಪ್ರಕರಣಗಳಲ್ಲಿ ಶೇಕಡಾವಾರು ಕಡಿಮೆಯಾಗಿದೆಯೇ ಅಥವಾ ಹೆಚ್ಚಾಗಿದೆಯೇ; ಹೆಚ್ಚಾಗಿದ್ದಲ್ಲಿ ಕಾರಣ ತಿಳಿಸುವುದು ಮತ್ತು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

## ಬಿಬಿಎಂಪಿ ವ್ಯಾಪ್ತಿಯ ಮಾರುಕಟ್ಟೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ

**ಶ್ರೀ ಎಂ.ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೦೩ (೩೭೭) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿರುವ ಮಾರುಕಟ್ಟೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಮಾರುಕಟ್ಟೆವಾರು ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಖಾಸಗಿ ಸಹಭಾಗಿತ್ವದಲ್ಲಿನ ಮಾರುಕಟ್ಟೆ ಅಭಿವೃದ್ಧಿ ಯೋಜನಾ ವೆಚ್ಚ ಎಷ್ಟು; ಯಾವ ಅನುಪಾತದಡಿ ಮತ್ತು ನಿಯಮ, ನಿಬಂಧನೆಗಳಡಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಮಲ್ಲೇಶ್ವರ ಮಾರುಕಟ್ಟೆಯ ಸ್ಥಳದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣ ನಿರ್ಮಿಸುವ ಯೋಜನೆಯು ಯಾವ ಹಂತದಲ್ಲಿದೆ; ನಿರ್ಮಾಣ ಗುತ್ತಿಗೆ ಪಡೆದ ವ್ಯಕ್ತಿ/ಸಂಸ್ಥೆ, ವ್ಯಯಿಸಲಾಗುವ ವೆಚ್ಚ, ಕಾಮಗಾರಿಗೆ ನಿಗಧಿಪಡಿಸಿರುವ ಕಾಲಮಿತಿ ಹಾಗೂ ಪ್ರಸ್ತುತ ಈ ನಿಟ್ಟಿನಲ್ಲಿ ; ಆಗಿರುವ ಪ್ರಗತಿ ಕುರಿತಂತೆ ಪ್ರತ್ಯೇಕ ಮಾಹಿತಿಯನ್ನು ಒದಗಿಸುವುದು ;



(ಈ) ನಿಗಧಿತ ಯೋಜನಾ ವೆಚ್ಚ, ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಏನು ? (ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿನ ನಿಗಮ–ಮಂಡಳಿಗಳ ನಿರ್ವಹಣೆ

**ಶ್ರೀ ಎಂ.ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೦೪ (೩೭೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನಿಗಮ ಮಂಡಳಿಗಳ ಒಟ್ಟು ಸಂಖ್ಯೆ ಎಷ್ಟು ; ಅವು ಯಾವುವು; ಇವುಗಳಲ್ಲಿ ಲಾಭ ಮತ್ತು ನಷ್ಟದಲ್ಲಿರುವ ನಿಗಮ–ಮಂಡಳಿಗಳು ಯಾವುವು ;

(ಆ) ಈ ನಿಗಮ–ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿಗಳ ಸಂಖ್ಯೆ ಎಷ್ಟು; ಕಳೆದ ಐದು ವರ್ಷಗಳ ಅವಧಿಯಲ್ಲಿ ವೇತನ, ಭತ್ಯೆ ಸೇರಿದಂತೆ ವಾರ್ಷಿಕ ವೆಚ್ಚವೆಷ್ಟು ; (ವರ್ಷಾವಾರು, ನಿಗಮವಾರು ಮಾಹಿತಿಯನ್ನು ಒದಗಿಸುವುದು)

(ಇ) ನಷ್ಟದಲ್ಲಿರುವ ನಿಗಮ–ಮಂಡಳಿಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಸರ್ಕಾರದ ಆಲೋಚನೆ ಏನು ? (ವಿವರ ಒದಗಿಸುವುದು)

## ಬಿ.ಡಿ.ಎ. ಠೇವಣಿ ಹಣ ಅಕ್ರಮ / ನಿಯಮಬಾಹಿರ ವರ್ಗಾವಣೆ ಬಗ್ಗೆ

**ಶ್ರೀ ಎಂ.ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೦೫ (೩೭೫) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :––

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪ್ರಾಧಿಕಾರದ ಹಣವನ್ನು ಠೇವಣಿ ಇಡುವಲ್ಲಿ ಅನುಸರಿಸುತ್ತಿರುವ ಮಾನದಂಡವೇನು ; ಇದುವರೆವಿಗೂ ಠೇವಣೆ ರೂಪದಲ್ಲಿ ಸಂಗ್ರಹಿಸಲಾಗಿರುವ ಒಟ್ಟು ಹಣವೆಷ್ಟು; ಯಾವ ಬ್ಯಾಂಕ್, ಸಂಸ್ಥೆಗಳಲ್ಲಿ ಹಣ ಹೂಡಿಕೆ ಮಾಡಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಆ) ಪ್ರಾಧಿಕಾರದ ಹಣವನ್ನು ನಿಯಮಾವಳಿ ವಂಚಿಸಿ ಖಾಸಗೀ ಮ್ಯೂಚುವಲ್ ಫಂಡ್ ಸಂಸ್ಥೆಯಂತಹ ಅನ್ಯ ಉದ್ದೇಶಗಳಿಗೆ ವರ್ಗಾವಣೆಯಾಗಿರುವುದು ನಿಜವೇ ; ಹಾಗಿದ್ದಲ್ಲಿ, ಯಾವ ಸ್ವರೂಪದಲ್ಲಿ, ಯಾರಿಗೆ ಮತ್ತು ಎಷ್ಟು ಮೊತ್ತದ ಹಣ ವರ್ಗಾವಣೆಯಾಗಿದೆ ; (ಪ್ರತ್ಯೇಕವಾದ ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಪ್ರಾಧಿಕಾರಕ್ಕೆ ಈ ಅಕ್ರಮ ವರ್ಗಾವಣೆ ಮತ್ತು ಸ್ವಜನ ಪಕ್ಷಪಾತದಿಂದಾಗಿ ಆಗಿರುವ ಆರ್ಥಿಕ ನಷ್ಟದ ಅಂದಾಜು ಸರ್ಕಾರಕ್ಕೆ ಇದೆಯೇ ; ಹಾಗಿದ್ದಲ್ಲಿ, ಇದರಲ್ಲಿ ಭಾಗಿಯಾದ



ಅಧಿಕಾರಿಗಳು, ಸಿಬ್ಬಂದಿಗಳು, ವಿಭಾಗ ಕುರಿತಾಗಿ ಸಂಪೂರ್ಣವಾದ ಪ್ರತ್ಯೇಕ ಮಾಹಿತಿಯನ್ನು ಒದಗಿಸುವುದು

(ಈ) ಈ ಅವ್ಯವಹಾರದ ಕುರಿತಾಗಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ? (ಸಂಪೂರ್ಣ ವಿವರ ಒದಗಿಸುವುದು)

## ಬಳ್ಳಾರಿ ಜಿಲ್ಲೆಯಲ್ಲಿ ಒಂದಂಕಿ ಲಾಟರಿ ಹಾವಳಿ ನಿಯಂತ್ರಿಸುವ ಕುರಿತು

**ಶ್ರೀ ಮೃತ್ಯುಂಜಯ ಜಿನಗಾ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೦೬(೩೭೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಒಂದಂಕಿ ಲಾಟರಿ ಯಥೇಚ್ಛವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಒಂದಂಕಿ ಲಾಟರಿ ತಡೆಗಟ್ಟಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದೇ ;

(ಇ) ಈವರೆಗೆ ಇಂತಹ ಪ್ರಕರಣಗಳ ಕುರಿತು ಏನಾದರೂ ಶಿಸ್ತು ಕ್ರಮ ಕೈಗೊಳ್ಳಲಾಗಿದೆಯೇ ? (ವಿವರ ನೀಡುವುದು)

## ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲಾ ಇಲಾಖೆಯಲ್ಲಿರುವ ಸಿಬ್ಬಂದಿಗಳ ಕೊರತೆ

**ಶ್ರೀ ಮೃತ್ಯುಂಜಯ ಜಿನಗಾ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೦೭ (೩೭೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿರುವ ವಿವಿಧ ಇಲಾಖೆಗಳ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸಿಬ್ಬಂದಿಗಳ ಕೊರತೆಯಿಂದಾಗಿ ಸಾರ್ವಜನಿಕರ ಕೆಲಸ ಕಾರ್ಯಗಳು ನಿಧಾನವಾಗುತ್ತಿದ್ದು, ಅಭಿವೃದ್ಧಿ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗದಿರುವುದು ನಿಜವೆ ;

(ಇ) ಈ ಸಿಬ್ಬಂದಿಗಳ ಕೊರತೆ ನೀಗಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ; ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ?

## ಬೆಂಗಳೂರಿನಲ್ಲಿ ಮೇಲು ಸೇತುವೆ ಕಾಮಗಾರಿಗಳು

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :–**

೩೦೮ (೩೩೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಈವರೆವಿಗೆ ಎಷ್ಟು ಮೇಲು ಸೇತುವೆಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ ;



(ಆ) ಎಷ್ಟು ಮೇಲು ಸೇತುವೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ ; ಇದಕ್ಕಾಗಿ ವೆಚ್ಚ ಮಾಡಲಾಗಿರುವ ಹಣವೆಷ್ಟು ;

(ಇ) ಈ ಮೇಲು ಸೇತುವೆಗಳ ಕಾಮಗಾರಿಗಳನ್ನು ಎಂದು ಪೂರ್ಣಗೊಳಿಸಲಾಗುವುದು ?

## ಮೆಟ್ರೋ ನಿಲ್ದಾಣಗಳಲ್ಲಿ ಶೌಚಾಲಯ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :–**

೩೦೯ (೩೨೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೆಟ್ರೋ ರೈಲು ನಿಲ್ದಾಣಗಳಲ್ಲಿ ಶೌಚಾಲಯಗಳನ್ನು ಕಲ್ಪಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮೆಟ್ರೋ ರೈಲು ನಿಲ್ದಾಣಗಳಲ್ಲಿ ಶೌಚಾಲಯಗಳನ್ನು ನಿರ್ಮಿಸದಿದ್ದಲ್ಲಿ, ರೈಲಿನಲ್ಲಿ ಪ್ರಯಾಣಿಸುವ ವಯೋವೃದ್ಧರು, ಮಧುಮೇಹ ರೋಗದಿಂದ ಬಳಲುತ್ತಿರುವ ಪ್ರಯಾಣಿಕರಿಗೆ ತುರ್ತು ಸಂದರ್ಭದಲ್ಲಿ ನೈಸರ್ಗಿಕ ಕರೆಗೆ ಸ್ಪಂದಿಸಲು ಕಷ್ಟವಾಗುವುದಿಲ್ಲವೇ ;

(ಇ) ಮೆಟ್ರೋ ರೈಲು ನಿಲ್ದಾಣಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

## ಪಾನಮತ್ತ ಚಾಲಕರ ಮೇಲೆ ದಾಖಲಾದ ಮೊಕದ್ದಮೆಗಳ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :–**

೩೧೦ (೩೨೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೨ ರಿಂದ ಈವರೆವಿಗೆ ಪಾನಮತ್ತ ಚಾಲಕರ ವಿರುದ್ಧ ದಾಖಲಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು ; ದಂಡ ರೂಪದಲ್ಲಿ ಸಂಗ್ರಹಿಸಲಾದ ಮೊತ್ತ ಎಷ್ಟು ;

(ಆ) ಈ ಸಂಬಂಧ ಈವರೆವಿಗೆ ಎಷ್ಟು ಜನ ಪಾನಮತ್ತ ಚಾಲಕರ ವಾಹನ ಚಾಲನಾ ಪರವಾನಗಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ?

## ಕೊಪ್ಪಳ ಜಿಲ್ಲೆಯಲ್ಲಿನ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಆದ್ಯತೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೧೧ (೩೩೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿನ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಲಾಗಿದೆಯೇ ;



(ಆ) ಈ ಭಾಗದ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಸ್ಥಾನಮಾನ ನೀಡದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಡಾ॥ ಸರೋಜಿನಿ ಮಹಿಷಿ ವರದಿ ಆಧಾರದ ಮೇಲೆ ಕಡ್ಡಾಯವಾಗಿ ಸ್ಥಳೀಯರಿಗೆ ಆದ್ಯತೆ ನೀಡದೇ ಇರುವಂತಹ ಕೈಗಾರಿಕೆಗಳ ಮೇಲೆ ಸರ್ಕಾರ ಜರುಗಿಸಬಹುದಾದ ಕ್ರಮವೇನು ;

(ಉ) ಈ ಕುರಿತು ರಾಜ್ಯದಲ್ಲಿ ಎಲ್ಲಿಯಾದರೂ ಕ್ರಮ ಕೈಗೊಂಡ ಉದಾಹರಣೆಗಳು ಇವೆಯೇ ; ಇದ್ದಲ್ಲಿ ವಿವರ ನೀಡುವುದು ?

## ಕೊಪ್ಪಳ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಮಂಜೂರಾದ ಅನುದಾನದ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೧೨ (೩೩೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಕಳೆದ ೨ ವರ್ಷಗಳಲ್ಲಿ ಮುಜರಾಯಿ ಇಲಾಖೆಗೆ ಮಂಜೂರಾದ ಅನುದಾನ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಮಂಜೂರಾದ ಅನುದಾನದಲ್ಲಿ ಯಾವ ಯಾವ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಲಾಗಿದೆ ; (ದೇವಸ್ಥಾನವಾರು ಮಾಹಿತಿ ನೀಡುವುದು)

(ಇ) ಅನುದಾನ ಬಳಕೆ ಮಾಡಲು ಸರ್ಕಾರ ಯಾವ ಯಾವ ಮಾನದಂಡಗಳನ್ನು ಅನುಸರಿಸುತ್ತಿದೆ ;

(ಈ) ಸದ್ಯ ಅನುದಾನ ಬಳಕೆ ಮಾಡಿಕೊಂಡ ದೇವಸ್ಥಾನಗಳ ಕಾಮಗಾರಿಗಳು ಯಾವ ಹಂತದಲ್ಲಿದೆ ? (ದೇವಸ್ಥಾನವಾರು ಮಾಹಿತಿ ನೀಡುವುದು)

## ಚಿತ್ರದುರ್ಗ ಪಟ್ಟಣದಲ್ಲಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಗಳು

**ಶ್ರೀ ಜಿ. ರಘು ಆಚಾರ್ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೧೩ (೩೭೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿತ್ರದುರ್ಗ ಪಟ್ಟಣದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ರಾಜ್ಯ ಸರ್ಕಾರದ ಒಳಚರಂಡಿ ಯೋಜನೆಗಳಡಿಯಲ್ಲಿ ಕೈಗೊಳ್ಳಲಾಗಿರುವ ಒಳಚರಂಡಿ ಯೋಜನೆಯ ಕಾಮಗಾರಿಗಳು ಯಾವ ಹಂತದಲ್ಲಿವೆ ; ಇದಕ್ಕೆ ೨೦೧೫ ಜನವರಿ ಅಂತ್ಯಕ್ಕೆ ವೆಚ್ಚವಾದ ಅನುದಾನ ಎಷ್ಟು ; (ಮಾಹಿತಿ ಒದಗಿಸಿರಿ)

(ಆ) ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮವೇನು ; (ಮಾಹಿತಿ ಒದಗಿಸಿರಿ)

(ಇ) ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ನಿಗಧಿಪಡಿಸಲಾಗಿದೆಯೇ ; ಹಾಗಿದ್ದಲ್ಲಿ, ಸದರಿ ಕಾಮಗಾರಿ ಪೂರ್ಣಗೊಳ್ಳುವುದು ಯಾವಾಗ ? (ಮಾಹಿತಿ ಒದಗಿಸಿರಿ)

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು–59/ಕಾ.ಸೂ.03485 / 1000 ಪ್ರತಿಗಳು/03–02–15